ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 65 RNI Number : KNKAN/25/A2770 12-03-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :65 ರಾಯಚೂರು 12-03-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ನಾಯಕತ್ವ ಬದಲಾವಣೆ ಗೊಂದಲದ ನಡುವೆಯೇ ಸಂಪುಟ ಪುನಾರಚನೆ ಕುರಿತು ಚರ್ಚೆ

ಬೆಂಗಳೂರು, ಮಾ.11- ನಾಯಕತ್ವದ ಬದಲಾವಣೆಗೆ ಸಂಬಂಧಪಟ್ಟಂತೆ ಗೊಂದಲಗಳ ನಡುವೆಯೇ ಕಾಂಗ್ರೆಸ್‌ನ ಹಿರಿಯ ಶಾಸಕರು ಪ್ರತ್ಯೇಕ ಸಭೆ ನಡೆಸಿ ಸಚಿವ ಸಂಪುಟ ಪುನರ್‌ರಚನೆಗೆ ಒತ್ತಡ ಹೇರಲು ಮುಂದಾಗಿದ್ದಾರೆ.

ಎರಡು, ಮೂರು ಬಾರಿಗಿಂತಲೂ ಹೆಚ್ಚಿನ ಅವಧಿಗೆ ಶಾಸಕರಾಗಿರುವವರು ನಾಳೆ ನಗರದ ಖಾಸಗಿ ಕ್ಲಬ್‌ನಲ್ಲಿ ಸಭೆ ಸೇರಿ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ 31 ಮಂದಿ ಮೊದಲ ಬಾರಿಗೆ ಆಯ್ಕೆಯಾದ ಶಾಸಕರು ಪಕ್ಷದ ವರಿಷ್ಠರಿಗೆ ಪತ್ರ ಬರೆದು ಸಚಿವ ಸಂಪುಟ ಪುನರ್‌ರಚನೆಯ ವೇಳೆ ತಮ್ಮಲ್ಲಿ 5 ಮಂದಿಯನ್ನು ಪರಿಗಣಿಸುವಂತೆ ಮನವಿ ಮಾಡಿದ್ದರು. ಅದರ ಬೆನ್ನಲ್ಲೇ ಹಿರಿಯ ಶಾಸಕರು ಪ್ರತ್ಯೇಕ ಸಭೆ ನಡೆಸಲಿದ್ದು ಸಂಪುಟ ಪುನರ್‌ರಚನೆ ಮತ್ತು

ತಮಗೆ ಅವಕಾಶ ಪಡೆದುಕೊಳ್ಳುವ ಬಗ್ಗೆ ಕಾರ್ಯತಂತ್ರ ರೂಪಿಸಲು ಮುಂದಾಗಿದ್ದಾರೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಗೊಂದಲವೇ



ಇನ್ನೂ ಬಗೆಹರಿದಿಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರ್ಣಗೊಳಿಸಿದ ಸಂದರ್ಭದಲ್ಲಿ ನೀಡಿದ್ದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣದ ಶಾಸಕರು, ಸಚಿವರು ಭಾಗವಹಿಸಿ ಒಗ್ಗಟ್ಟು ಪ್ರದರ್ಶನ ಮಾಡಿದರು.

ಇಂದು ಸಂಜೆ ಕಾಂಗ್ರೆಸ್ ಶಾಸಕಾಂಗ ಸಭೆ ನಡೆಯಲಿದೆ. ಅಲ್ಲಿ ನಾಯಕತ್ವದ ಬದಲಾವಣೆ, ಸಚಿವ ಸಂಪುಟ ಪುನರ್‌ರಚನೆ, ಹಿರಿಯರು-ಕಿರಿಯರು ಆದ್ಯತೆ, ಬಜೆಟ್ ಕುರಿತ ಚರ್ಚೆ, ಅನುದಾನ ಹಂಚಿಕೆ, ಸಚಿವರ ಕಾರ್ಯವೈಖರಿ ಸೇರಿದಂತೆ ನಾನಾ ವಿಚಾರಗಳು ಚರ್ಚೆಯಾಗಲಿವೆ.


ಇಂದು ಶಾಸಕಾಂಗ ಸಭೆ ನಡೆಯಲಿದ್ದು, ನಾಳೆ ಹಿರಿಯ ಶಾಸಕರು ಪ್ರತ್ಯೇಕ ಸಭೆಗೆ ಮುಂದಾಗಿರುವುದು ಬೆಳವಣಿಗೆಗಳ ಮೇಲೆ ತೀವ್ರ ನಿಗಾ ಇರಿಸುವಂತೆ ಮಾಡಿದೆ. ಈವರೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಣದ ಶಾಸಕರು ಪ್ರತ್ಯೇಕವಾಗಿ ಔತಣಕೂಟ ಆಯೋಜಿಸಿದ್ದರು. ಇದು ಬಣ ರಾಜಕೀಯವನ್ನು ಹೆಚ್ಚಾಗುವಂತೆ ಮಾಡಿತು. ಈ ಬಣಗಳ ಮೇಲಾಟಕ್ಕೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಇಬ್ಬರು ಸೊಪ್ಪು ಹಾಕಲಿಲ್ಲ. ಡಿ.ಕೆ.ಶಿವಕುಮಾರ್ ಅವರಂತೂ ನೇರವಾಗಿ ನನ್ನ ಪರವಾಗಿ ಯಾರೂ ಹೇಳಿಕೆಗಳನ್ನು ನೀಡುವ ಅಗತ್ಯ ಇಲ್ಲ ಎಂದು ನಿಷ್ಠೂರವಾಗಿ ಹೇಳಿದ್ದರು.

ನಿನ್ನೆ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸುವ ಸಂದೇಶದಲ್ಲಿ ಸಿದ್ದರಾಮಯ್ಯ ಅವರು 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಮರಳಿ ಅಧಿಕಾರಕ್ಕೆ ತರುವ ಹೊಣೆಗಾರಿಕೆ ನಮಿಬ್ಬರ ಮೇಲಿದೆ ಎಂದು ಹೇಳುವ ಮೂಲಕ ಸದ್ಯಕ್ಕೆ ಅಧಿಕಾರ ಬಿಟ್ಟುಕೊಡುವ ಲಕ್ಷಣಗಳಿಲ್ಲ ಎಂಬ ಪರೋಕ್ಷ ಸಂದೇಶ ಸಾರಿದ್ದಾರೆ.

ನಾಯಕತ್ವದ ಗೊಂದಲದ ನಡುವೆಯೇ ಹಿರಿಯ-ಕಿರಿಯ ಶಾಸಕರುಗಳು ಬಣಗಳ ಜಂಜಾಟ ಬದಿಗಿರಿಸಿ ತಮ ಅನುಕೂಲ ಸಿಂಧು ರಾಜಕಾರಣವನ್ನು ನೋಡಿಕೊಳ್ಳಲು ಮುಂದಾಗಿದ್ದಾರೆ. ಸಚಿವ ಸಂಪುಟ ಪುನರ್‌ರಚನೆಯಾದರೆ, ಅವಕಾಶ ಪಡೆಯಬೇಕೆಂದು ಕಿರಿಯರು ಪ್ರಯತ್ನಿಸುತ್ತಿರುವ ನಡುವೆಯೇ ಹಿರಿಯ ಶಾಸಕರು ಪಕ್ಷದಲ್ಲಿ ತಮ ಪಾತ್ರ ಏನು? ಎಂಬ ಪ್ರಶ್ನೆಗಳನ್ನು ಮುಂದಿಡಲು ತಯಾರಾಗುತ್ತಿದ್ದಾರೆ.

ಆರ್.ವಿ.ದೇಶಪಾಂಡೆ, ಟಿ.ಬಿ.ಜಯಚಂದ್ರ, ಲಕ್ಷ್ಮಣ ಸವದಿ, ಕೆ.ಎಮ್. ಶಿವಲಿಂಗೇಗೌಡ, ಎನ್ವೀರ್ ಶೇಟ್ ಸೇರಿದಂತೆ ಮೂವತ್ತಕ್ಕೂ ಹೆಚ್ಚು ಹಿರಿಯ ಶಾಸಕರು ಸಭೆ ಸೇರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಒಳಮೀಸಲಾತಿಗೆ ಆಗ್ರಹಿಸಿ ರಾಯಚೂರು ನಗರ ಬಂದ್







ರಾಯಚೂರು,ಮಾ.11-

ಪರಿಶಿಷ್ಟ ಜಾತಿಯ ಜನರಿಗೆ ಒಳ ಮೀಸಲು ನಿಗದಿ ಮಾಡಿ ಸರಕಾರಿ ಹುದ್ದೆಗಳನ್ನು ನೇಮಿಸುವಂತೆ ಒತ್ತಾಯಿಸಿ ಮಾದಿಗ ಸಂಬಂಧಿತ ಸಂಘಟನೆಗಳಿಂದ ಕರೆ ನೀಡಿದ ರಾಯಚೂರು ಬಂದ್ ಹೋರಾಟಕ್ಕೆ ಉತ್ತಮ ಸ್ಪಂದನ ವ್ಯಕ್ತವಾಗಿದೆ.

ರಾಜ್ಯ ಸರ್ಕಾರ 56,432 ಸರ್ಕಾರಿ ಹುದ್ದೆಗಳನ್ನು ನೇಮಿಸಲು ನಿರ್ಧರಿಸಿದೆ. ಆದರೆ ಪ್ರಕರಣವೊಂದರಲ್ಲಿ ಶೇ.50ರಷ್ಟು ಮೀಸಲಾತಿ ಮೀರದಂತೆ ನೀಡಿರುವ ತೀರ್ಪಿನಂತೆ ಶೇ.50 ಮೀಸಲಾತಿಯಂತೆ ನೇಮಕಾತಿ ಮಾಡುವುದಾಗಿ ಸರ್ಕಾರ ಹೇಳಿದೆ. ಆದರೆ ಮಾದಿಗ ಸಮುದಾಯದ ನಿರುದ್ಯೋಗಿ ಯುವಕರಿಗೆ ಅನ್ಯಾಯವಾಗಲಿದ್ದು, ಒಳಮೀಸಲು ನಿಗದಿಪಡಿಸಿಯೇ ನೇಮಕಾತಿ ನಡೆಸಲು ಹೋರಾಟ ನಡೆಸಲಾಗುತ್ತದೆ.

ಎಸ್ಸಿ -ಎಸ್ಟಿ ಸಮುದಾಯಗಳಿಗೆ ಶೇ.50 ಮೀಸಲು ನಿಗದಿಪಡಿಸಿದ ಒಳ ಮೀಸಲು ಕಾಯ್ದೆಗೆ ರಾಜ್ಯಪಾಲರ ಅಂಕಿತ ದೊರೆತಿದೆ. ನೇಮಕಾತಿಯಲ್ಲೇ ಒಳ ಮೀಸಲು ನಿಗದಿಪಡಿಸಿ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಲಾಗುತ್ತಿದೆ.

ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಉದ್ದೇಶ ಪೂರಕವಾಗಿ ತಪ್ಪಿಸುವ ಉದ್ದೇಶದಿಂದ ಅನಗತ್ಯ ಗೊಂದಲ ಸೃಷ್ಟಿಸುತ್ತಿದೆ. ಶೇ.15 ಮೀಸಲಾತಿಯನ್ನು ಹಂಚಿಕೆ ಮಾಡಿ ನೇಮಕಾತಿ ಮಾಡಿಕೊಳ್ಳಬೇಕು. ಇಲ್ಲದೇ ಹೋದರೆ ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತದೆ. ಅಲೆಮಾರಿಗಳಿಗೆ ಅನ್ಯಾಯ ಮಾಡಿರುವ ಸರ್ಕಾರ ಈಗ ಮಾದಿಗರೂ ಅನ್ಯಾಯ ಮಾಡಲು ಹೊರಟಿದೆ ಎಂದು ದೂರಿದರು.

ಹೋರಾಟದ ಭಾಗವಾಗಿ ಇಂದು ಕೇಂದ್ರ ಬಸ್ ನಿಲ್ದಾಣದಿಂದ ಯಾವುದೇ ಬಸ್ ಹೊರಡಲಿಲ್ಲ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಹೋರಾಟಗಾರರು ಟೆಂಟ್ ಹಾಕಿ ರಸ್ತೆ ತಡೆ ನಡೆಸಿದರು.

3ನೇ ಪುಟಕ್ಕೆ

ಮನೆ ಪಟ್ಟಿ, ವಸತಿ ಗಣತಿ ಕ್ಷೇತ್ರ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಚಾಲನೆ

ಜನಗಣತಿ ಕಾರ್ಯ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ



ರಾಯಚೂರು ಮಾರ್ಚ್ 11

ದೇಶದಲ್ಲಿ ಪ್ರಥಮ ಬಾರಿಗೆ ಸಂಪೂರ್ಣ ಡಿಜಿಟಲ್ ರೀತಿಯಲ್ಲಿ ಜನಗಣತಿ ನಡೆಯಲಿದ್ದು, ಕಾರ್ಯಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಮತ್ತು ಸಹಾಯಕ ಅಧಿಕಾರಿಗಳು ಈ ಜನಗಣತಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.

ಮಾರ್ಚ್ 11ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮನೆ ಪಟ್ಟಿ ಮತ್ತು ವಸತಿ ಗಣತಿ ಕುರಿತು ಕ್ಷೇತ್ರ ಮಟ್ಟದ ತರಬೇತಿಗಾರರಿಗೆ 3 ದಿನಗಳ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜನಗಣತಿಯಲ್ಲಿ ಸ್ವಯಂ ಗಣತಿಯ ಆಯ್ಕೆಯೂ ಲಭ್ಯವಿದೆ. ಮೊದಲ ಹಂತದಲ್ಲಿ ಏ.16ರಿಂದ 30 ದಿನಗಳ ಕಾಲ ಮನೆ ಪಟ್ಟಿ ಕಾರ್ಯ ನಡೆಯಲಿದೆ. 2ನೇ ಹಂತದಲ್ಲಿ ಜನಸಂಖ್ಯಾ ಎಣಿಕೆ ಕಾರ್ಯ 2027ರ ಫೆಬ್ರವರಿಯಲ್ಲಿ ನಡೆಯಲಿದ್ದು, ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಜನಗಣತಿ-2027 ಪ್ರಕ್ರಿಯೆಯ ಪೂರ್ವ ಸಿದ್ಧತೆಗಳು ಆರಂಭಗೊಳ್ಳುತ್ತಿದ್ದು, ಸಂಬಧಿಸಿದ ಅಧಿಕಾರಿಗಳು ಈ ಜನಗಣತಿ ಪ್ರಕ್ರಿಯೆಗೆ ಅವಶ್ಯವಿರುವ ಅಗತ್ಯ ನಕ್ಷೆಗಳು, ನಮೂನೆಗಳನ್ನು ತಯಾರು ಮಾಡುವುದು ಸೇರಿದಂತೆ ಎಲ್ಲ ಪೂರ್ವ ತಯಾರಿ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಜನಗಣತಿ ಕರ್ತವ್ಯ ನಿರ್ವಹಿಸಬೇಕು. ನೋಡಲ್ ಅಧಿಕಾರಿಗಳು ಹಿರಿಯ ಅಧಿಕಾರಿಗಳ ಜತೆ ಸಮನ್ವಯ ಸಾಧಿಸಿಕೊಂಡು ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಉಪಸ್ಥಿತರಿದ್ದ ಮಾಸ್ಟರ್ ಟ್ರೇನರ್ ಸದಾಶಿವಪ್ಪ ಅವರು ಮಾತನಾಡಿ, 2011ರಲ್ಲಿ ಜನಗಣತಿಯು ಹಳೆಯ ಮ್ಯಾನುವೆಲ್ ಪದ್ಧತಿಯಲ್ಲಿ ನಡೆದಿತ್ತು. ಆದರೆ, ಈ ಬಾರಿ ಮೊಬೈಲ್ ಆ್ಯಪ್ ಮೂಲಕ ಡಿಜಿಟಲ್ ಮೋಡ್‌ನಲ್ಲಿ ನಡೆಯಲಿದೆ. ಡಿಜಿಟಲ್ ಮೋಡ್‌ನಲ್ಲಿ ನಡೆಯುವ ಜನಗಣತಿಯು ನಿಖರತೆ ಹಾಗೂ ಪಾರದರ್ಶಕತೆಯಿಂದ ಕೂಡಿರಲಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು

3ನೇ ಪುಟಕ್ಕೆ



ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ಶೀಘ್ರ ಹಣ ಜಮೆ

ರಾಯಚೂರು,ಮಾ.11

2025-26ನೇ ಸಾಲಿನಲ್ಲಿ ಗೃಹಲಕ್ಷ್ಮಿ ಯೋಜನೆಯ ಒಂಬತ್ತನೇ ಕಂತಿನ ಅನುದಾನದಲ್ಲಿ ಜಿಲ್ಲೆಯ 4,06,897 ಫಲಾನುಭವಿಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರಾಯಚೂರು ಇವರ ಮೂಲಕ 87,58,76,000 ರೂ.

4 ನೇಯ ಪುಟಕ್ಕೆ

ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು ಸಮಯ ಪಾಲನೆ ಉತ್ತಮ ಸಂಸ್ಕೃತಿ ಬಹುಮುಖ್ಯ - ಪಿ.ಬಸವರಾಜ್ ನಾಯಕ



ರಾಯಚೂರು ಬೆಳಕು ನ್ಯೂಸ್

ಸಿರವಾರ,ಮಾ.10-

ವಿದ್ಯಾರ್ಥಿಗಳು ಉನ್ನತ ಮಟ್ಟದ ಶಿಕ್ಷಣವನ್ನು ಪಡೆಯಬೇಕಾದರೆ ಬಾರಿ ಜ್ಞಾನ ಇದ್ದರೆ ಸಾಲದು ಅದರ ಜೊತೆಗೆ ಮುಖ್ಯವಾಗಿ ವಿದ್ಯಾರ್ಥಿಗಳ ಜೀವನದಲ್ಲಿ ವಿವೇಕ ಶಿಸ್ತು ಸಮಯ ಪಾಲನೆ ಬಹು ಮುಖ್ಯವಾಗಿರಬೇಕು ಎಂದು ಮಾಡಗಿರಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಪಿ. ಬಸವರಾಜ್ ನಾಯಕ ಹೇಳಿದರು.

ತಾಲೂಕಿನ ಮಾಡಗಿರಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಮಂಗಳವಾರದಂದು ಹಮ್ಮಿಕೊಂಡಿದ್ದ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭ ಹಾಗೂ ಸರಸ್ವತಿ ಭಾವಚಿತ್ರಕ್ಕೆ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳು ಈ ದೇಶದ ಭವಿಷ್ಯ ಅವರು ಮುಂದಿನ ದಿನಗಳಲ್ಲಿ ಎನು ಬೇಕಾದರೂ ಸಾಧಿಸಬಹುದಾದಂ

3ನೇ ಪುಟಕ್ಕೆ

ಕೇಂದ್ರ ಬಸ್ ನಿಲ್ದಾಣ ಶೌಚಾಲಯ ಅವ್ಯವಸ್ಥೆ

ಹೆಚ್ಚುವರಿ ಹಣ ವಸೂಲಿ ಕ್ರಮಕ್ಕೆ ಒತ್ತಾಯ



ರಾಯಚೂರು, ಮಾ.1-

ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ಅವ್ಯವಸ್ಥೆ ಹಾಗೂ ಟೆಂಡರ್ ನಿಯಮ ಉಲ್ಲಂಘಿಸಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಕೆಎಸ್ ಆರ್ ಟಿ ವಿಭಾಗೀಯ ನಿಯಂತ್ರಣಧಿಕಾರಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಹೋರಾ ಟಗಾರ ಆ ವ ನಡುಮನಿ ಅವರು ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ. ಬಸ್ ನಿಲ್ದಾಣದ ಒಳಗೆ ಇರುವ ಶೌಚಾಲಯ ಮತ್ತು ಮೂತ್ರಾಲಯ ಕೋಣೆಗಳು ಗಬ್ಬೆದ್ದು ಹೋಗಿವೆ, ಸರಿಯಾಗಿ ನಿರ್ವಹಣೆ ಇಲ್ಲದಂತಾಗಿದೆ. ಶೌಚಕ್ಕೆ ಕೇವಲ 3 ರೂ ಮೂತ್ರ ವಿಸರ್ಜನೆ ಉಚಿತವಾಗಿ ಇದೆ ಎಂದು ಬೋರ್ಡ್ ಹಾಕಿದ್ದರು ಸಹ ಶೌಚಾಲಯ ನಿರ್ವಹಣೆ ಮಾಡುವವರು ಪ್ರತಿಯೊಬ್ಬರಿಂದ 10 ರೂ ಪಡೆಯುತ್ತಿದ್ದಾರೆ ಎಂದು ದೂರಿದರು.ಮೂತ್ರ ವಿಸರ್ಜನೆ ಉಚಿತವಾಗಿ ಇದ್ದರು ಕೂಡ ಮಹಿಳೆಯರಿಂದ 10 ರೂ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇದು ದಿನಂಪ್ರತಿ ಹಗಲು, ರಾತ್ರಿ ಅವ್ಯವಹತವಾಗಿ ನಡೆಯುತ್ತಿದೆ, ಅಲ್ಲದೇ ಮಹಿಳೆಯರ ಶೌಚಾಲಯ ಕೋಣೆಗೆ ನಿರ್ವಹಣೆ ಮಾಡುವವರು ಪುರುಷರು ಇರುತ್ತಾರೆ, ಮಹಿಳಾ ಶೌಚಾಲಯ ಕೋಣೆಗೆ ಸ್ವಚ್ಛತಾ ನೆಪದಲ್ಲಿ ಗಂಟೆ ಗೊಮ್ಮೆ ಒಳಗೆ ಪ್ರವೇಶ ಮಾಡುತ್ತಾರೆ ಇದರಿಂದ ಮಹಿಳೆಯರಿಗೆ ಮುಜುಗರವಾಗುತ್ತದೆ.ಟೆಂಡರನಲ್ಲಿ ಮಹಿಳೆಯರನ್ನೆ ಈ ಕೆಲಸಕ್ಕೆ ನಿಯೋಜಿಸಬೇಕು ಎಂದು ತಿಳಿಸಿದ್ದರು ಕೂಡ ಟೆಂಡರ್ ಪಡೆದವರು ನಿರ್ಲಕ್ಷ ಮಾಡಿದ್ದಾರೆ ,ಈ ಮೊದಲು ಶೌಚಾಲಯ ಮುಂದುಗಡೆ ಶೌಚಾಲಯ, ಮೂತ್ರದ ದರದ ಬೋರ್ಡ್ ಇತ್ತು, ಇವಾಗ ತೆಗೆದು ಹಾಕಿದ್ದಾರೆ, ಇನ್ನು 3 ಕಡೆ ದರವನ್ನು ಗೋಡೆಮೇಲೆ ಬರೆಯಲಾಗಿತ್ತು ಇದನ್ನು ಕೂಡ ಮರೆಮಾಡಿದ್ದಾರೆ ಇದರಿಂದ ಜನರು ಏನು ಮಾತಾಡದೆ 10 ರೂಪಾಯಿ ಕೊಟ್ಟು ಹೋಗುತ್ತಾರೆ, ಕೊಡದಿದ್ದಲ್ಲಿ ಹತ್ತು ರೂಪಾಯಿ ಕೊಡಲೇಬೇಕೆಂದು ಒತ್ತಾಯ ಮಾಡಿ ಕೇಳಿ ಪಡೆಯುತ್ತಾರೆ. ಹೆಚ್ಚಾಗಿ

3ನೇ ಪುಟಕ್ಕೆ

ಚಲವಾದಿ ಹೆಸರಿನಲ್ಲಿ ಎಸ್‌ಸಿ ಪ್ರಮಾಣಪತ್ರ ನೀಡಬಾರದು: ಮಹೇಂದ್ರಕುಮಾರ್ ಮಿತ್ರ

ರಾಯಚೂರು, ಮಾ.11 -

ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇರುವ ಚಲವಾದಿ, ಚಲ್ವಾಡಿ, ಚನ್ನಯ್ಯ ಉಪಜಾತಿಯ ಹೆಸರಿನಲ್ಲಿ ಬೇರೆ ಉಪಜಾತಿಗಳಿಗೆ ಸಿಂಧುತ್ವ ಪ್ರಮಾಣಪತ್ರ ನೀಡಬಾರದು ಎಂದು ಡಾ. ಅಂಬೇಡ್ಕರ್ ಪೀಪಲ್ಸ್ ಪಾರ್ಟಿಯ ರಾಜ್ಯ ಕಾರ್ಯಾಧ್ಯಕ್ಷ ಮಹೇಂದ್ರಕುಮಾರ್ ಮಿತ್ರ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿನ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಕೋಟಾದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯುವ



ಸಂದರ್ಭದಲ್ಲಿ ಯಾವುದೇ ತೊಂದರೆ ಉಂಟಾಗಬಾರದೆಂಬ ಉದ್ದೇಶದಿಂದ ಈ ಸುದ್ದಿ ಗೋಷ್ಠಿಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಅವುಗಳಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡಲು ಫೆಬ್ರವರಿ 27, 2026 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ ಎಂದು ಅವರು ತಿಳಿಸಿದರು. 1995ರ ಜೂನ್ 20ರಂದು ಪ್ರಕಟವಾದ ರೋಸ್ಟರ್ ಪ್ರಕಾರ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದ್ದು, ಸರ್ಕಾರಿ ನೌಕರಿಗೆ ಆಯ್ಕೆಯಾದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಸಂಬಂಧಿತ ಇಲಾಖೆಗೆ ಜಾತಿಯ ಸಿಂಧುತ್ವ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ ಎಂದರು.

ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಒಟ್ಟು 101 ಉಪಜಾತಿಗಳಿದ್ದು, ಕೆಲವರು ತಮ್ಮ ಮೂಲ ಜಾತಿಯ ಬದಲು ಮತ್ತೊಂದು ಉಪಜಾತಿಯನ್ನು ತಮ್ಮದಾಗಿ ತೋರಿಸಿ ತಹಶೀಲ್ದಾರರಿಗೆ ಸುಳ್ಳು ಮಾಹಿತಿ ನೀಡಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರಗಳನ್ನು ಪಡೆಯುತ್ತಿರುವುದು ಭಾರತ ಸಂವಿಧಾನದ ಪ್ರಕಾರ ತಪ್ಪಾಗಿದೆ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್‌ನ ಐದು ನ್ಯಾಯಾಧೀಶರ ಸಂವಿಧಾನ ಪೀಠವು ಬಿ. ಬಸವಲಿಂಗಪ್ಪ ವಿರುದ್ಧ ಡಿ. ಮುನಿಚಿನ್ನಪ್ಪ ಪ್ರಕರಣದಲ್ಲಿ ನೀಡಿದ ತೀರ್ಪಿನ ಪ್ಯಾರಾ 6ರಲ್ಲಿ, ಒಂದು ಜಾತಿ ಮತ್ತೊಂದು ಜಾತಿಗೆ ಸಮಾನವಾಗಿದ್ದರೆ ಅದರ ಪಕ್ಕದಲ್ಲಿ ಬ್ರಾಕೆಟ್‌ನಲ್ಲಿ ಉಲ್ಲೇಖಿಸಬೇಕೆಂದು ಹೇಳಿದೆ ಎಂದು ಅವರು ವಿವರಿಸಿದರು.

ರಾಜ್ಯದ ಪರಿಶಿಷ್ಟ ಜಾತಿ

3ನೇ ಪುಟಕ್ಕೆ

ಭಾರತ ಜನಗಣತಿ 2027ರ ಪೂರ್ವಭಾವಿ ತರಬೇತಿ ಕಾರ್ಯಾಗಾರ

ಕೊಪ್ಪಳ:ಜನಗಣತಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು- ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ



ಕೊಪ್ಪಳ ಮಾ.11

ಭಾರತ ಜನಗಣತಿ 2027ರ ಕಾರ್ಯಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಮತ್ತು ಸಹಾಯಕ ಅಧಿಕಾರಿಗಳು ಜನಗಣತಿ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಸಂಬಂಧ ಜಿಲ್ಲಾ ಹಂತದ ಅಧಿಕಾರಿಗಳು, ನಗರ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಆಯೋಜಿಸಿದ್ದ ಮೂರು ದಿನಗಳ ಪೂರ್ವಭಾವಿ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಜನಗಣತಿ-2027 ಪ್ರಕ್ರಿಯೆಯ ಪೂರ್ವ ಸಿದ್ಧತೆಗಳು ಆರಂಭಗೊಳ್ಳುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಈ ಜನಗಣತಿ ಪ್ರಕ್ರಿಯೆಗೆ ಅವಶ್ಯವಿರುವ ಅಗತ್ಯ ನಕ್ಷೆಗಳು, ನಮೂನೆಗಳನ್ನು ತಯಾರು ಮಾಡುವುದು ಸೇರಿದಂತೆ ಎಲ್ಲಾ ಪೂರ್ವ ತಯಾರಿಗಳನ್ನು ಮಾಡಿಕೊಳ್ಳ ಬೇಕು. ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ಜನಗಣತಿ ಕರ್ತವ್ಯವನ್ನು ನಿರ್ವಹಿಸಬೇಕು. ಈ ಕಾರ್ಯದ ಮೇಲ್ವಿಚಾರಣೆಗಾಗಿ ನೇಮಕವಾದ ತಾಲ್ಲೂಕು ನೋಡಲ್ ಅಧಿಕಾರಿಗಳು, ತಮಗೆ ಹಂಚಿಕೆ ಮಾಡಲಾದ ತಾಲ್ಲೂಕಿನ ಅರ್ಬನ್ ಮತ್ತು ರೂರಲ್ ಚಾರ್ಜಗಳಲ್ಲಿ ಜನಗಣತಿ ಕಾರ್ಯ 2027ರ ಸಂಬಂಧಿತ ಕಾರ್ಯಗಳನ್ನು ಸಂಬಂಧಪಟ್ಟ ತಹಶೀಲ್ದಾರರು, ಪೌರಾಯುಕ್ತರು ಅಥವಾ ಮುಖ್ಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚನೆ ನೀಡಿದರು.

ನಿಖರ ಜನಗಣತಿಯಿಂದ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ಜನಸಾಮಾನ್ಯರಿಗೆ ತಲುಪಿಸಲು ಅನುಕೂಲವಾಗಲಿದೆ. ಕಳೆದ ಬಾರಿ 2011ರಲ್ಲಿ ಜನಗಣತಿಯು ಹಳೆಯ ಮ್ಯಾನುವೆಲ್ ಪದ್ಧತಿಯಲ್ಲಿ ನಡೆದಿತ್ತು. ಆದರೆ, ಈ ಬಾರಿ 2027ರ ಜನಗಣತಿಯು ಸಂಪೂರ್ಣವಾಗಿ ಮೊಬೈಲ್ ಆ್ಯಪ್ ಮೂಲಕ ಡಿಜಿಟಲ್ ಮೋಡ್‌ನಲ್ಲಿ ನಡೆಯಲಿದೆ. ಡಿಜಿಟಲ್ ಮೋಡ್‌ನಲ್ಲಿ ನಡೆಯುವ ಜನಗಣತಿಯು ನಿಖರತೆ ಹಾಗೂ ಪಾರ ದರ್ಶಕತೆಯಿಂದ ಕೂಡಿರಲಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಲು ಸಾಧ್ಯವಾಗಲಿದೆ. ಹಾಗಾಗಿ ಜಿಲ್ಲಾ ಹಂತದ ಅಧಿಕಾರಿಗಳು, ನಗರ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳಿಗೆ ಪೂರ್ವಭಾವಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾ ದೆ ಎಂದರು.

2027ರ ಜನಗಣತಿಯು ಎರಡು ಹಂತಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಮೊದಲ ಹಂತದಲ್ಲಿ ಕರ್ನಾಟಕದಲ್ಲಿ ಮನೆಪಟ್ಟಿ ಕಾರ್ಯಚರಣೆಯು 2026ರ ಏಪ್ರಿಲ್ 16 ರಿಂದ ಮೇ 15ರ ವರೆಗೆ ಒಂದು ತಿಂಗಳ ಕಾಲ ನಡೆಯಲಿದೆ.

ಈ ಮೂವತ್ತು ದಿನಗಳ ಮನೆಪಟ್ಟಿ ಕಾರ್ಯ ಪ್ರಾರಂಭವಾಗುವ ಹದಿನೈದು ದಿನಗಳ ಮೊದಲು ಸ್ವಯಂ ಗಣತಿಯ ಆಯ್ಕೆ ಲಭ್ಯವಿರುತ್ತದೆ. ಎರಡನೇ ಹಂತದ ಜನಗಣತಿಯು 2027ರ ಫೆಬ್ರುವರಿಯಿಂದ ಆರಂಭವಾಗಲಿದೆ. ಈ ಬಾರಿಯ ಜನಗಣತಿಯಲ್ಲಿ ಎಲ್ಲ ಅಧಿಕಾರಿಗಳು ಪ್ರಮಾಣಿಕವಾಗಿ ಕಾರ್ಯನಿರ್ವಹಿಸಿ, ಜನಗಣತಿಯಲ್ಲಿ ಜಿಲ್ಲೆಗೆ ಮೊದಲ ಸ್ಥಾನ ತರುವಲ್ಲಿ ಶ್ರಮಿಸಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, 2027ರ ಜನಗಣತಿ ಕಾರ್ಯವನ್ನು ನಿಗದಿತ ಸಮಯದಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಬೇಕಾಗಿರುವುದರಿಂದ ಕಾಲ ಕಾಲಕ್ಕೆ ಕೈಗೊಳ್ಳಬೇಕಾಗಿರುವ ವಿವಿಧ ಕಾರ್ಯಗಳಾದ ಫೀಲ್ಡ್ ಟ್ರೇರ್ನಗಳ ನೇಮಕಾತಿ ಮತ್ತು ತರಬೇತಿ, ಮನೆ ಪಟ್ಟಿ ಬ್ಲಾಕ್ ಮತ್ತು ಸೂಪರ್ವೈಜರಿ ಸರ್ಕಲ್‌ಗಳ ರಚನೆ, ಎನುಮರೇಟರ್ ಮತ್ತು ಮೇಲ್ವಿಚಾರಕರ ನೇಮಕಾತಿ ಮತ್ತು ತರಬೇತಿ, ಹೌಸ್ ಲಿಸ್ಟಿಂಗ್ ಹಾಗೂ ಇತರೆ ಕಾರ್ಯಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವ ಬಗ್ಗೆ ಮೇಲ್ವಿಚಾರಣೆ ಮಾಡಲು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಕ್ಯಾ. ಮಹೇಶ ಮಾಲಗಿತ್ತಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ನಗರ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಕಲಾವಿದರನ್ನು ಗೌರವಿಸುವ ಸಂಸ್ಕಾರ ಬೆಳೆಸಬೇಕು: ಚಂದ್ರಶೇಖರ ಗೌಡ

ಬಳ್ಳಾರಿ,ಮಾ.11-

ಕಲಾವಿದರನ್ನು ಪೋಷಿಸುವ ಹಾಗೂ ಗೌರವಿಸುವ ಕಲಾಸಂಸ್ಕಾರವನ್ನು ಪ್ರತಿಯೊಬ್ಬರೂ ಜೀವನದಲ್ಲಿ ರೂಡಿಸಿಕೊಂಡಾಗ ಮಾತ್ರ, ಕಲೆಗೆ ನಿಜವಾದ ಗೌರವ ಸಿಗುತ್ತದೆ ಎಂದು ಯುವ ಉದ್ಯಮಿ ಎಂ. ಚಂದ್ರಶೇಖರ ಗೌಡ ಹೇಳಿದರು.

ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಿರುಗುಪ್ಪದ ನೇತ್ರ ಕಲಾ ಸಂಘದ 15ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರ ಮತ್ತು ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನೇತ್ರ ಕಲಾ ಸಂಸ್ಥೆ ಸಾಹಿತಿಗಳು, ಕಲಾವಿದರು ಹಾಗೂ ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಸನ್ಮಾನಿಸುವ ಕಾರ್ಯ ಮೆಚ್ಚುವಂತಾಗಿದೆ. ಇತ್ತೀಚಿನ ದಿನಗಳಲ್ಲಿ ಮನುಷ್ಯರಲ್ಲಿ ತಿಳುವಳಿಕೆ ಕಡಿಮೆಯಾಗಲು ಸ್ವಾರ್ಥಪರ ಆಲೋಚನೆ ಕಾರಣವಾಗಿದೆ. ಯುವಕರು ಸತ್ಯದ ಚಿಂತನೆಯ ಜೊತೆಗೆ ಸಂಸ್ಕಾರಯುತ ಕಲೆಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ವೀರೇಶ್ ದಳವಾಯಿ ಮಾತನಾಡಿ, ಎಲೆಮರೆಯ ಕಾಯಿಯಂತಿರುವ ಅನೇಕ ಕಲಾವಿದರನ್ನು ಸರ್ಕಾರ ಗುರುತಿಸಲು ಸಾಧ್ಯವಾಗುತ್ತಿಲ್ಲ. ಅಂತಹ ಕಲಾವಿದರನ್ನು ಗುರುತಿಸಿ ಪ್ರತಿವರ್ಷ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಗುತ್ತಿದೆ. ಕೋವಿಡ್ ಸಮಯದಲ್ಲಿ ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗಲಿಲ್ಲ. ಇದೀಗ 15ನೇ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಗೌರವಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಹಿತಿಗಳು, ಸಂಗೀತಜ್ಞರು, ಕಲಾವಿದರು, ಸಮಾಜಸೇವಕರು, ಪತ್ರಕರ್ತರು ಹಾಗೂ ಸಂಘಸಂಸ್ಥೆಗಳ ಸಂಘಟಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೆ ಚಿಕ್ಕುಂತಿ ಮಹಾಮಠದ ಬಸವಲಿಂಗ ಶಿವಮೂರ್ತಿ ಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಬಿ. ನಾಗರಾಜ, ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಮಾನಯ್ಯ, ಹಿರಿಯ ಸಾಹಿತಿ ಗಂಗಾಧರ ಪತ್ತಾರ್, ನೇತ್ರ ಕಲಾ ಸಂಘದ ಅಧ್ಯಕ್ಷ ದಳವಾಯಿ ಅಂಬಣ್ಣ, ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಎಲ್ಲನಗೌಡ, ರಂಗತೋರಣದ ಪ್ರಭುದೇವ್ ಕಪ್ಪಗಲ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.



ಸಂಸ್ಕಾರಯುತ ಶಿಕ್ಷಣ ನೀಡಿ: ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ

ಬಾಗಲಕೋಟೆ,ಮಾ.11-

ತಾಲ್ಲೂಕಿನ ಮನ್ನಿಕೇರಿ ಗ್ಲೋಬಲ್ ಗೈಡ್ ಪಬ್ಲಿಕ್ ಶಾಲೆಯ ದಶಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸಿರುವ ಸರ್ಕಾರದ ನಿರ್ಧಾರವು ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಮಾನಸಿಕ ಸುರಕ್ಷತೆಯ ದೃಷ್ಟಿಯಿಂದ ಕ್ರಾಂತಿಕಾರಿ ಹೆಜ್ಜೆಯಾಗಿದೆ ಎಂದರು.

ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯೆಯ ಜೊತೆಗೆ ಸಂಸ್ಕಾರ ಕಲಿಸುವ ಅಗತ್ಯವಿದೆ. ಇಂದು ತಂದೆ-ತಾಯಿಯರನ್ನು ಗೌರವಿಸುವ ಗುಣ ಕಡಿಮೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ವೃದ್ಧಾಶ್ರಮಗಳು ಹೆಚ್ಚಾಗುತ್ತಿದ್ದು ಪ್ರಜ್ಞಾವಂತರೆ ಹೆಚ್ಚು ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸುರೇಶ ಮನಗೂಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇವಲ 44 ಮಕ್ಕಳಿಂದ ಆರಂಭವಾದ ಸಂಸ್ಥೆ ಇಂದು 425 ಮಕ್ಕಳನ್ನೂ ಹೊಂದಿದೆ. ಪ್ರಸ್ತುತವಾಗಿ ಶಿಕ್ಷಣದ ಅನಿವಾರ್ಯತೆಯನ್ನು ಮನಗಂಡು, ಭವ್ಯ ಭಾರತವನ್ನು ಕಟ್ಟುವಲ್ಲಿ ಸಂಸ್ಥೆ ಶ್ರಮಿಸುತ್ತಿದೆ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್.ಆದಾಪೂರ, ಸಾಹಿತಿ ಸದಾ ನಂದ ಏಳಗಂಟಿ ಮಾತನಾಡಿದರು. ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿ ಗಳನ್ನು ಸನ್ಮಾನಿಸಿದರು. ವಿದ್ಯಾರ್ಥಿ ಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಾಕ್ರಮಗಳು ಜರುಗಿದವು. ಸಂಸ್ಥೆಯ ಗೌರವಾಧ್ಯಕ್ಷ ಸಿದ್ದಪ್ಪ ಮನಗೂಳಿ . ವೈದ್ಯರಾದ ಅರ್ಚನಾ ದಡ್ಡೆನವರ, ವಿಕಾಸ ದಡ್ಡೆನವರ, ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಆಶಾ ಬೀಳಗಿ ಹಾಗೂ ಬೂದಿಹಾಳ ಎಸ್.ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಿ. ಆರ್. ನದಾಫ ಚಂದ್ರಕಾಂತ ಕೇಶನೂರ, ಸಿಆರ್‌ಪಿ ಎ.ಬಿ. ಪಾಟೀಲ ಇದ್ದರು.

ಶಿಕ್ಷಕರು ಹೊಸ ವಿಷಯಗಳಿಗೆ ಅಪ್‌ಡೇಟ್ ಆಗಬೇಕು: ಪ್ರೊ.ಶಶಿಕಾಂತ್ ಉಡಿಕೇರಿ



ಕಲಬುರಗಿ,ಮಾ.11-

ಹೊಸ ವಿಷಯಗಳು ಮತ್ತು ತಂತ್ರಜ್ಞಾನಗಳಿಗೆ ಶಿಕ್ಷಕರು ಸದಾ ಅಪ್‌ಡೇಟ್ ಆಗಿರಬೇಕು. ಜ್ಞಾನ ಮತ್ತು ಕಲಿಕೆ ಯಾರೊಬ್ಬರ ಸ್ವತ್ತಲ್ಲ. ಬೋಧನೆಯಲ್ಲಿ ನಾವೀನ್ಯತೆ, ವೈಜ್ಞಾನಿಕ ಚಿಂತನೆ ಹಾಗೂ ಹೊಸ ವಿಧಾನಗಳನ್ನು ಅಳವಡಿಸಿಕೊಂಡು ಉತ್ಕೃಷ್ಟಜ್ಞಾನಶಕ್ತಿಯನ್ನು ಗಳಿಸಬೇಕು ಎಂದು ಪ್ರೊ. ಶಶಿಕಾಂತ್ ಉಡಿಕೇರಿ ಹೇಳಿದರು.

ನಗರದ ಗುಲ್ಬರ್ಗ ವಿಶ್ವವಿದ್ಯಾಲಯದ ಮಂಥನ ಸಭಾಂಗಣದಲ್ಲಿ ರೂಸಾ/ಪಿಎಂ ಉಷಾ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ, ಗುಲ್ಬರ್ಗಾ ವಿಶ್ವವಿದ್ಯಾಲಯ ಹಾಗೂ ರಿಲಯನ್ಸ್ ಫೌಂಡೇಶನ್ ಸ್ಕಿಲ್ಲಿಂಗ್ ಅಕಾಡೆಮಿ ಮತ್ತು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಿದ್ದ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ (ಎಫ್‌ಡಿಪಿ) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಾವೀನ ಬೋಧನಾ ತಂತ್ರಗಳು ಮತ್ತು ಪಠ್ಯಕ್ರಮ ಚೌಕಟ್ಟು ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉನ್ನತ ಶಿಕ್ಷಣ ಬೋಧನೆ ಮತ್ತು ಪಠ್ಯ ವಿಷಯಗಳಲ್ಲಿ ಪ್ರಾಯೋಗಿಕ ಜ್ಞಾನ ಅತ್ಯಗತ್ಯ. ತಂತ್ರಜ್ಞಾನ ಬಳಕೆಯೊಂದಿಗೆ ಪಠ್ಯ ವಿಷಯಗಳನ್ನು ಪರಿಣಾಮಕಾರಿಯಾಗಿ ಬೋಧಿಸುವ ಶಕ್ತಿಯನ್ನು ಶಿಕ್ಷಕರು ಹೊಂದಿರಬೇಕು. ವಿದ್ಯಾರ್ಥಿಗಳ ಜ್ಞಾನ ಮಟ್ಟವನ್ನು ಅರಿತು ಅವರಿಗೆ ಅಗತ್ಯಕ್ಕೆ ತಕ್ಕಂತೆ ಬೋಧನೆ ಮಾಡುವ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕಲಾ ನಿಕಾಯದ ಡೀನ್ ಹಾಗೂ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಎಚ್.ಟಿ.ಪೋತೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಾಂಪ್ರದಾಯಿಕ ಕಲಿಕೆಯಿಗಿಂತ ನಾವೀನ್ಯತೆ ಮತ್ತು ಸೃಜನಶೀಲತೆಗೆ ಹೆಚ್ಚು ಒತ್ತು ನೀಡಬೇಕು. ವಿದ್ಯಾರ್ಥಿ ಕೇಂದ್ರಿತ ಬೋಧನೆಯ ಮೂಲಕ ಅವರನ್ನು ನೈಜ ಪ್ರಪಂಚದತ್ತ ಸೆಳೆಯಬೇಕು ಎಂದರು.

ವೈಜ್ಞಾನಿಕ ಮನೋಭಾವನೆ ಮತ್ತು ಉದ್ಯೋಗಾರ್ಹ ಕೌಶಲ್ಯಗಳನ್ನು ಬೆಳೆಸುವ ಮೂಲಕ ವಿದ್ಯಾರ್ಥಿಗಳನ್ನು ಉನ್ನತ ಗುರಿ ಸಾಧನೆಗೆ ಸಿದ್ಧಗೊಳಿಸುವುದು ಶಿಕ್ಷಕರ ಪ್ರಮುಖ ಕರ್ತವ್ಯವಾಗಿದೆ ಎಂದು ಹೇಳಿದರು.

ಬೋಧನೆಯಲ್ಲಿ ತಂತ್ರಜ್ಞಾನ ಬಳಕೆ ಅಗತ್ಯವಾದರೂ, ಅದರಿಂದ ಸೃಜನಶೀಲತೆ ಕುಂಠಿತವಾಗಬಾರದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸತ್ಯ, ನಿಖರತೆ ಹಾಗೂ ಆಧಾರಿತ ಗ್ರಂಥಪುಸ್ತಕಗಳತ್ತ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಅವರು ಅಭಿಪ್ರಾಯ ಪಟ್ಟರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಜಿ. ಕಣ್ಣೂರು, ಅನ್ವಯಿಕ ವಿದ್ಯುನ್ಮಾನ ವಿಭಾಗದ ಹಿರಿಯ ಪ್ರಾಧ್ಯಾಪಕ ಹಾಗೂ ಕಾರ್ಯಕ್ರಮ ಸಂಯೋಜಕ ಪ್ರೊ. ಆರ್. ಎಲ್ ರಾಯಭಾಗಕರ್ ಅತಿಥಿಗಣ್ಯರನ್ನು ಸ್ವಾಗತಿದರು. ಡಾ. ಮಂಜುರ ಅಹ್ಮದ್ ದಖ್ಖಾನಿ, ಡಾ. ಮಂಜುಳ ಬೋವಿ, ಡಾ. ಅನಿಲ್ ಕುಮಾರ್ ಹಾಲು, ಡಾ.ಸಾವಿತ್ರಿ ಹಾಗೂ ಡಾ.ಹನುಮಂತರಾಯ ರಾಂಪೂರೆ ಅನಿಸಿಕೆ ವ್ಯಕ್ತಪಡಿಸಿದರು. ರೂಸಾ-ಪಿಎಂ ಉಷಾ ನೋಡಲ್ ಅಧಿಕಾರಿ ಡಾ.ವಿದ್ಯಾಧರ ಎಸ್. ಮೇಲಕೇರಿ ಎರಡು ದಿನಗಳ ಕಾರ್ಯಕ್ರಮ ಮತ್ತು ಗೋಷ್ಠಿ ವರದಿ ಮಂಡಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಮ್ಯಾಜಿಕ್ ಬಸ್ ಇಂಡಿಯಾ ತರಬೇತಿ ಅಧಿಕಾರಿ ಜೋಶುವಾ ಡೇನಿಯಲ್, ಜೆಕಾರ್ತಿಕೇಯ ತರಬೇತಿ ಸಲಹಾ ಸಂಸ್ಥೆಯ ಸಿಇಓ ಡಾ. ಅಭಯ್ ಸರ್ದೇಶ್‌ಪಾಂಡೆ, ರಿಲಯನ್ಸ್ ಫೌಂಡೇಶನ್ ಸ್ಕಿಲ್ಲಿಂಗ್ ಅಕಾಡೆಮಿ ಸದಸ್ಯರಾದ ರೇಖಾ ಕುಮಾರಿ, ಜಾಬೆಜ್, ಪೌಜಿತ ಇದ್ದರು.

ವಿವಿಧ ನಿಕಾಯಗಳ ಡೀನರು, ಸಿಂಡಿಕೇಟ್ ಸದಸ್ಯರು, ವಿದ್ಯಾ ವಿಷಯಕ ಪರಿಷತ್ ಸದಸ್ಯರು, ಸ್ನಾಕತೋತ್ತರ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾಥಿ ರ್ಗಳು, ಪದವಿ ಮಹಾವಿದ್ಯಾಲಯಗಳ ಅಧ್ಯಾಪಕರು ಭಾಗವಹಿಸಿದ್ದರು. ಸಂಗೀತ ವಿಭಾಗದ ಅತಿಥಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಉಪನ್ಯಾಸಕ ಡಾ. ಎಂ. ಬಿ. ಕಟ್ಟಿ ಕಾರ್ಯಕ್ರಮ ನಿರ್ವಹಿಸಿದರು.



ಔರಾದ್: ಶಾಲೆಗೆ ಬಂತು ನೀರು, ಮಕ್ಕಳಲ್ಲಿ ಸಂಭ್ರಮ

ಬೀದರ್,ಮಾ.11-

ಕುಡಿಯುವ ನೀರಿಗೆ ವಿದ್ಯಾರ್ಥಿಗಳ ಪರದಾಟ ಎಂಬ ಶೀರ್ಷಿಕೆಯಲ್ಲಿ ಪ್ರಜಾವಾಣಿ ಜನವರಿ.31 ರಂದು ವಿಶೇಷ ವರದಿ ಪ್ರಕಟಿಸಿತ್ತು. ವರದಿಯಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ಶಾಲೆ ಆವರಣದಲ್ಲಿ ಕೊಳವೆ ಬಾವಿ ಕೊರೆಸಿದ್ದು, ಸೋಮವಾರ ಅದಕ್ಕೆ ಮೋಟರ್ ಅಳವಡಿಸಿ ನೀರು ಹರಿಸಿದ್ದಾರೆ. ಮಕ್ಕಳು ನೀರಿನ ಜತೆ ಆಟ ಆಡಿ ಕೆಲ ಹೊತ್ತು ಕುಣಿದು ಸಂತಸ ಪಟ್ಟರು.

ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ಪತ್ರಿಕೆಯಿಂದ ತಿಳಿದು ಮರುದಿನವೇ ನಾಗಮಾರಪಳ್ಳಿ ಶಾಲೆಗೆ ಭೇಟಿ ನೀಡಿ ಹೊಸ ಕೊಳವೆ ಬಾವಿ ಕೊರೆಯಲು ಪ್ರಸ್ತಾವನೆ ಸಲ್ಲಿಸಲಾಯಿತು. ಅದರಂತೆ ಕೆಆರ್‌ಐಡಿಎಲ್ ದಿಂದ ಕೊಳವೆ ಬಾವಿ ಕೊರೆಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಇಒ ಕಿರಣ ಪಾಟೀಲ ತಿಳಿಸಿದರು.

ನಾಗಮಾರಪಳ್ಳಿ ಸರ್ಕಾರಿ ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿ ವಿದ್ಯಾರ್ಥಿಗಳು ಗ್ರಾಮ ಪಂಚಾಯಿತಿ ಕಚೇರಿ ಎದುರು ಧರಣಿ ನಡೆಸಿದರು. ಅಲ್ಲದೆ ಪ್ರಜಾವಾಣಿ ಪ್ರಕಟಿಸಿದ ವರದಿಯಿಂದ ಅಧಿಕಾರಿಗಳು ಎಚ್ಚೆತ್ತುಕೊಂಡು ಕೊಳವೆ ಬಾವಿ ಕೊರೆದು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ ಎಂದು ಗ್ರಾಮಸ್ಥ ಧನರಾಜ ನಾಗಮಾರಪಳ್ಳಿ ತಿಳಿಸಿದರು.

ಮಾಹಿತಿ ತಪ್ಪಾಗದಂತೆ ಜಾಗ್ರತೆ ವಹಿಸಿರಿ ಎಂದ ಸಂಗಪ್ಪ



ಬಾಗಲಕೋಟೆ, ಮಾ.11-

ಜಿಲ್ಲೆಯಲ್ಲಿ ಜನಗಣತಿ ಕಾರ್ಯವನ್ನು ಯಶಸ್ವಿಯಾಗಿ ಹಾಗೂ ನಿಖರವಾಗಿ ನಡೆಸುವ ಉದ್ದೇಶದಿಂದ ಸೋಮವಾರದಿಂದ ಹಮ್ಮಿಕೊಂಡಿರುವ ಮೂರು ದಿನಗಳ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತರಬೇತಿ ಕಾರ್ಯಾಗಾರದಲ್ಲಿ ಸಂಪೂರ್ಣವಾಗಿ ಮಾಹಿತಿ ಪಡೆದುಕೊಳ್ಳಬೇಕು. ಅದನ್ನು ಗಣತಿ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಚುನಾವಣೆ ಕಾರ್ಯ, ಮಹತ್ವಾಕಾಂಕ್ಷಿ ಯೋಜನೆ ಅನುಷ್ಠಾನಕ್ಕೆ ಕಟಿಬದ್ಧರಾಗಿ ಕೆಲಸ ಮಾಡಬೇಕಾಗುತ್ತದೆ. ಅಭಿವೃದ್ಧಿ ಸೂಚ್ಯಂಕ ತೋರಿಸಲು ಅಂಕಿಅಂಶಂಗಳು ಅಗತ್ಯವಾಗಿ ಬೇಕಾಗುತ್ತದೆ. ಯೋಜನೆಗಳನ್ನು ಗುರುತಿಸಲು ಜನಗಣತಿ ಬಹಳ ಮಹತ್ವದ್ದಾಗಿದೆ. ಸರಿಯಾದ ಮಾಹಿತಿ ಸಂಗ್ರಹಿಸದಿದ್ದರೆ, ಅಭಿವೃದ್ದಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದರು.

ಜನರ ಅಭಿವೃದ್ದಿಗಾಗಿ ಯೋಜನೆ ರೂಪಿಸಲು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಆರೋಗ್ಯ ದೃಷ್ಟಿಯಿಂದ ಸಮೀಕ್ಷೆಯ ದತ್ತಾಂಶಗಳು ಬೇಕಾಗುತ್ತದೆ. ಜನಗಣತಿ ಪ್ರಕ್ರಿಯೆಯಲ್ಲಿ ಮನೆ, ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬೇಕಾಗುತ್ತದೆ. ನೀವು ಸಂಗ್ರಹಿಸಿದ ಮಾಹಿತಿ ಮುಂದಿನ 5 ವರ್ಷ ಇಲ್ಲವೇ 10 ವರ್ಷಗಳವರೆಗೆ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗಲಿದೆ ಎಂದರು. ಜನಗಣತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶಕ್ತಿಕುಮಾರ ಮಾತನಾಡಿ, ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡು ಜನಗಣತಿ ಕಾರ್ಯ ನಡೆಸಲಾಗುತ್ತಿದೆ. ತರಬೇತಿ ಕಾರ್ಯಾಗಾರದಲ್ಲಿ ಜನಗಣತಿ ಪ್ರಕ್ರಿಯೆ, ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ವಿಧಾನ, ಡಿಜಿಟಲ್ ಸಾಧನಗಳ ಬಳಕೆ ಹಾಗೂ ಮಾಹಿತಿ ದಾಖಲಿಸುವ ಕ್ರಮಗಳ ಕುರಿತು ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಜನಗಣತಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಶಮಕುಮಾರ ಎಸ್.ಬಿ, ತರಬೇತಿ ಜಿಲ್ಲಾ ನೋಡಲ್ ಅಧಿಕಾರಿ ಸುಶೀಲಕುಮಾರ ಶರ್ಮಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ ಮತ್ತಿತರರು ಇದ್ದರು.

ಶಿಕ್ಷಣದ ಜೊತೆ ಉತ್ತಮ ಸಂಸ್ಕಾರ ಅಗತ್ಯ



ಹುಲಸೂರ್,ಮಾ.11-

ಇಂದಿನ ದಿನಮಾನದಲ್ಲಿ ಶಿಕ್ಷಣ ಪಡೆಯುವುದರ ಜೊತೆಗೆ ಉತ್ತಮ ಸಂಸ್ಕಾರವೂ ಅಗತ್ಯವಾಗಿದೆ. ತಂದೆ, ತಾಯಿ ಹಾಗೂ ಶಿಕ್ಷಕರ ಮನಸ್ಸಿ ಗೆ ನೋವುಂಟು ಮಾಡುವಂತಹ ಕೆಲಸಗಳನ್ನು ಯುವಜನತೆ ಮಾಡಬಾರದು ಎಂದು ನಿವೃತ್ತ ಶಿಕ್ಷಕ ಚನ್ನಬಸಪ್ಪ ಪತಂಗೆ ಹೇಳಿದರು.

ತಾಲೂಕಿನ ಮುಚಳಂಬ ಗ್ರಾಮದ ಶ್ರೀ ರಾಮಲಿಂಗೇಶ್ವರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸೋಮವಾರ 198485ನೇ ಸಾಲಿನ 10ನೇ ತರಗತಿಯ ಹಳೆಯ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರು ವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯೆ ಕಲಿತ ವಿದ್ಯಾರ್ಥಿಗಳು ತಮ್ಮನ್ನು ಕಲಿಸಿದ ಗುರುಗಳನ್ನು ಸ್ವಂತ ಮಕ್ಕಳಿಗಿಂತಲೂ ಹೆಚ್ಚು ಆದರ ಹಾಗೂ ಗೌರವದಿಂದ ಕಾಣುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರು ತಮ್ಮ ತಂದೆತಾಯಿಗಳನ್ನು ವೃದ್ಧಾಶ್ರಮಕ್ಕೆ ಅಥವಾ ಬೀದಿಗೆ ತಳ್ಳುವಂತಹ ಘಟನೆಗಳು ಹೆಚ್ಚುತ್ತಿರುವುದು ದುಃಖಕರ ಸಂಗತಿಯಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸುಮಾರು 50 ವರ್ಷಗಳ ಹಿಂದೆ ಕಲಿತ ವಿದ್ಯಾರ್ಥಿಗಳು ತಮ್ಮ ಗುರುಗಳನ್ನು ಮರೆಯದೇ ಗುರು ವಂದನೆ ಕಾರ್ಯಕ್ರಮವನ್ನು ಆಯೋಜಿಸಿರುವುದು ಸಂತೋಷದ ವಿಷಯ ಎಂದು ನಿವೃತ್ತ ಶಿಕ್ಷಕ ಎಸ್. ಕಾಶಿನಾಥ್ ಹೇಳಿದರು.

ಹಳೆಯ ವಿದ್ಯಾರ್ಥಿಗಳ ಪರವಾಗಿ ರಮೇಶ್ ಮೂಲಗೆ ಪ್ರಸ್ತಾವಿಕವಾಗಿ ಮಾತನಾಡಿ, ಶಿಕ್ಷಕರು ನೀಡಿದ ಶಿಕ್ಷಣದಿಂದಲೇ ನಮ್ಮ ಭವಿಷ್ಯ ರೂಪುಗೊಂಡಿದೆ. ನಮಗೆ ಪಾಠ ಕಲಿಸಿದ ಎಲ್ಲಾ ಗುರುಗಳಿಗೆ ನಾವು ಸದಾ ಋಣಿಯಾಗಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳಾದ ಮಲ್ಲಮ್ಮ ಜೋಕಾರೆ, ರಮೇಶ್ ಮೂಲಗೆ ಹಾಗೂ ಅನೀಲಕುಮಾರ್ ಕಾಮಶೇಟಿ ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಾಗೂ ಗುರುಗಳ ಕುರಿತು ಅನುಭವಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯಗುರು ರವೀಂದ್ರ ಬಿರಾದಾರ್, ಕಾಶಿನಾಥ ಎಚ್., ರಾಜಶೇಖರ್, ಕಾಶಿನಾಥ್ ಬೆಸಂಗಿ, ಬಸವಣ್ಣಪ್ಪ ಚಾಕೋಟೆ, ಷಣ್ಮುಖ ಫಾಳೆ, ರಾಜಶೇಖರ್ ಬಿರಾದಾರ್, ಮನೋಹರ್ ಹಂಚೆ ಹಾಗೂ ಗುಂಡಣ್ಣ ಡಿಗ್ಗಿ ಸೇರಿದಂತೆ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಅಶೋಕ್ ಸ್ವಾಗತಿಸಿದರು. ಶಿಕ್ಷಕ ಶಿವಶಂಕರ್ ಪತಂಗೆ ನಿರೂಪಿಸಿದರು.

ಒಂದನೇಯ ಪುಟದಿಂದ

ಒಳಮೀಸಲಾತಿಗೆ ಆಗ್ರಹಿಸಿ ರಾಯಚೂರು ನಗರ ಬಂದ್

ಕಿರಾಣೆ ಬಝಾರ ಬಟ್ಟೆ ಬಝಾರ ಸರಾಫ್ ಬಝ್ಹಾರ್, ಸ್ಟೇಷನ್ ರಸ್ತೆ ಸೇರಿದಂತೆ ನಗರದ ಎಲ್ಲಾ ವ್ಯಾಪಾರ ಮಳಿಗೆಗಳು ಬಂದ್ ಮಾಡಿತ್ತು, ರಮಝಾನ್ ಹಿನ್ನೆಲೆ ಯಲ್ಲಿ ಚಂದ್ರಮೌಳೇಶ್ವರ ರಸ್ತೆ, ಬಟ್ಟೆ ಬಝಾರ್ ನಲ್ಲಿ ವ್ಯಾಪಾರಿ ಮಳಿಗೆ ತೆರೆದರೂ ಬಳಿಕ ಹೋರಾಟಗಾರರ ಮನವಿ ಮೇರೆಗೆ ಬಂದ್ ಮಾಡಿ ಬೆಂಬಲ ಸೂಚಿಸಿದರು.

ನಗರದ ಯಾವುದೇ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ನೀಡದೇ ಸಂಪೂರ್ಣ ಸ್ತಬ್ಧವಾಗಿತ್ತು. ಪೋಲೀ ಸರು ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಮನೆ ಪಟ್ಟಿ, ವಸತಿ ಗಣಿತ ಕ್ಷೇತ್ರ ಮಟ್ಟದ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ಜನಗಣತಿ ಕಾರ್ಯ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

ಸಮರ್ಪಕವಾಗಿ ತಲುಪಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

2027ರ ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಮೊದಲ ಹಂತದಲ್ಲಿ ಕರ್ನಾಟಕದಲ್ಲಿ ಮನೆಪಟ್ಟಿ ಕಾರ್ಯಾಚರಣೆ 2026ರ ಏ.16ರಿಂದ ಮೇ.15ರ ವರೆಗೆ ಒಂದು ತಿಂಗಳ ಕಾಲ ನಡೆಯಲಿದೆ. ಈ ಮೂವತ್ತು ದಿನಗಳ ಮನೆಪಟ್ಟಿ ಕಾರ್ಯ ಪ್ರಾರಂಭವಾಗುವ ಹದಿನೈದು ದಿನಗಳ ಮೊದಲು ಸ್ವಯಂ ಗಣತಿಯ ಆಯ್ಕೆ ಲಭ್ಯವಿರುತ್ತದೆ. ಎರಡನೇ ಹಂತದ ಜನಗಣತಿ 2027ರ ಫೆಬ್ರುವರಿಯಿಂದ ಆರಂಭವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಜನಗಣತಿಯ ಜಿಲ್ಲಾ ನೋಡಲ್ ಅಧಿಕಾರಿ ಸುದರ್ಶನ, ಮಾಸ್ಟರ್ ಟ್ರೆನಿಗಳಾದ ಮಲ್ಲೇಶ ನಾಯಕ, ಮಧು ಸೇರಿದಂತೆ ಇತರರು ಇದ್ದರು. ಜಿಲ್ಲಾಧಿಕಾರಿಗಳ ಕಚೇರಿಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಯ ಸಹಾಯಕ ನಿರ್ದೇಶಕರಾದ ಬಸವರಾಜ ನಾಗರಬೆಂಚಿ ಸ್ವಾಗತಿಸಿದರು. ವನಿತಾ ಅವರು ಕಾರ್ಯಕ್ರಮ ನಿರೂಪಿಸಿದರು.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ಶೀಘ್ರ ಹಣ ಜಮೆ

ಡಿಬಿಟಿ ಪ್ರಕ್ರಿಯೆ ಚಾಲ್ತಿ ಮಾಡಲಾಗಿದ್ದು, ಮುಂದಿನ ಎರಡು ಮೂರು ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಲಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು ಸಮಯ ಪಾಲನೆ ಉತ್ತಮ ಸಂಸ್ಕೃತಿ ಬಹುಮುಖ್ಯ - ಪಿ.ಬಸವರಾಜ್ ನಾಯಕ

ತಹ ಶಕ್ತಿ ಅವರಿಗೆ ಇದೆ ವಿದ್ಯಾರ್ಥಿಗಳ ಜೀವನದಲ್ಲಿ ಗುರಿ ಮುಖ್ಯ ಆ ಗುರಿಯನ್ನು ಮುಟ್ಟುವ ಪ್ರಯತ್ನ ಮಾಡಬೇಕು.

ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಜೀವನದಲ್ಲಿ ರೂಪಿಸಿ ಕೊಂಡು ಉನ್ನತ ಸ್ಥಾನದಲ್ಲಿ ಬೆಳೆದರೆ ಅದಕ್ಕಿಂತ ಸಂತೋಷ ಸಂಗತಿ ಗುರುಗಳಿಗೆ ಬೇರೇನಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ತಿಳಿಸಿದರು.

ಎಸ್ ಎಸ್ ಎಲ್ ಸಿ ವಿದ್ಯಾರ್ಥಿ ಗಳ ಬಿಳ್ಕೊಡುಗೆ ಕಾರ್ಯಕ್ರಮದಲ್ಲಿ 10ನೇ ತರಗತಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಇದೇ ವೇಳೆ ಶಾಲೆಯ ಮುಖ್ಯ ಶಿಕ್ಷಕ ಬಿ.ರಾಜಾಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಹೊಸ ತನವನ್ನು ಆವಿಷ್ಕರಿಸುವುದರೊಂದಿಗೆ ಪ್ರಜ್ಞಾವಂತ ರಾಗಿ ಬಾಳಬೇಕು ಬಣ್ಣದ ಮಾತುಗಳಿಗೆ ಬಲಿಯಾಗದೆ ಹಿರಿಯರು ತೋರಿಸಿದ ದಾರಿ ಯಲ್ಲಿ ನಡೆಯಬೇಕು ಸಕರಾತ್ಮ ಕ ವಿಚಾರಗ ಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳ ಬೇಕು ಉತ್ತಮ ಸಂಸ್ಕೃತಿ- ಸಂಸ್ಕಾರಗಳನ್ನು ಬೆಳೆಸಿಕೊಳ್ಳಬೇಕು ಬದುಕುವ ಕಲೆಯನ್ನು ರೂಢಿಸಿಕೊಳ್ಳಬೇಕು ಅಧ್ಯಯನ ಮತ್ತು ಸಹಕಾರ ಮನೋಭಾವವನ್ನು ಬೆಳಸಿಕೊಂ ಡು ಹೃದಯವಂತ ರಾಗಬೇಕು ಎಂದರು.

ಈ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರು, ಪೋಷಕರು, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೇಂದ್ರ ಬಸ್ ನಿಲ್ದಾಣ ಶೌಚಾಲಯ ಅವ್ಯವಸ್ಥೆ ಹೆಚ್ಚುವರಿ ಹಣ ವಸೂಲಿ ಕ್ರಮಕ್ಕೆ ಒತ್ತಾಯ

ಇಲ್ಲಿಗೆ ಬರುವವರು ಮಂತ್ರಾಲಯಕ್ಕೆ ಮತ್ತು ಶ್ರೀಶೈಲಕ್ಕೆ ಹೋಗುವ ಭಕ್ತಾಧಿಗಳು. ಒಂದು ಅಂದಾಜಿನ ಪ್ರಕಾರ ಈ ರಾಯಚೂರು ಬಸ್ ನಿಲ್ದಾಣದ ಶೌಚಾಲಯಕ್ಕೆ ಒಂದು ದಿನಕ್ಕೆ (24 ಗಂಟೆ) ಜನರಿಂದ ಸಂಗ್ರಹವಾಗುವ ಒಟ್ಟು ಹಣ 14 ಸಾವಿರ ರೂಪಾಯಿ. ಇನ್ನು ರಾಯಚೂರು ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣಗಳ ಶೌಚಾಲಯಗಳಿಂದ ಎಷ್ಟು ಹಣ ಸಂಗ್ರವಾಗಬಹುದು ಎಂದು ನೀವೇ ಊಹಿಸಿಕೊಳ್ಳಿ? ದರಪಟ್ಟಿ ಬೋರ್ಡು ಇಲ್ಲದ ಬಗ್ಗೆ ಹಾಗೂ ಹೆಚ್ಚಿಗೆ ಹಣ ಪಡೆಯುವ ಬಗ್ಗೆ ಸಾರಿಗೆ ನಿಗಮದ ಅಧಿಕಾರಿಗಳಿಗೆ ಗೊತ್ತಿದೆ, ಗೊತ್ತಿದ್ದರೂ ಕೂಡ ಕಣ್ಣಿದ್ದು ಕುರುಡರಾಗಿದ್ದಾರೆ ಏಕೆಂದರೆ ಇವರಿಗೂ ಸಹ ಈ ಶೌಚಾಲಯದಿಂದ ಜನರಿಂದ ಸಂಗ್ರಹವಾಗುವ ಅಕ್ರಮ, ಅನ್ಯಾಯದ ಹಣದಲ್ಲಿ ಶೇಕಡವಾರು ಇಂತಿಷ್ಟು ಎಂದು ಪಾಲು ಇರಬಹುದೆಂದು ಅನುಮಾನ ಮೂಡುತ್ತಿದೆ.

ಪದೇ ಪದೇ ಟೆಂಡರ್ ನಿಯಮದ ಆದೇಶ ಉಲ್ಲಂಘನೇ ಮಾಡುತ್ತಿರುವ ವಿಷಯಯವನ್ನು ಗಂಭೀರವಾಗಿ ಪರಿಗಣಿಸಿ ನಾಗರೀಕರ ಹಾಗೂ ಪ್ರಯಾಣಿಕರ ಹಿತದೃಷ್ಟಿಯಿಂದ ಸದ್ರಿಯವರ ಟೆಂಡರ್ ರದ್ದುಗೊಳಿಸಬೇಕು , ಇದಕ್ಕೆಲ್ಲ ಕುಮ್ಮಕ್ಕು ನೀಡುವ ಸೂತ್ರದಾರರಾದ ಕೆ ಕೆ ಆರ್ ಟಿ ಸಿ ಯ ರಾಯಚೂರು ವಿಭಾಗೀಯ ನಿಯಂತ್ರಣಾಧಿಕಾರಿ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಚಲವಾದಿ ಹೆಸರಿನಲ್ಲಿ ಎಸ್‌ಸಿ ಪ್ರಮಾಣಪತ್ರ ನೀಡಬಾರದು: ಮಹೇಂದ್ರಕುಮಾರ್ ಮಿತ್ರ

ಪಟ್ಟಿಯಲ್ಲಿ ಕ್ರಮ ಸಂಖ್ಯೆ 25ರಲ್ಲಿ ಬ್ಯಗಾರ, 44ರಲ್ಲಿ ಹೊಲೆಯ ಮತ್ತು 65ರಲ್ಲಿ ಮಾಲಾ ಉಪಜಾತಿಗಳಿದ್ದು, ಕ್ರಮ ಸಂಖ್ಯೆ 27ರಲ್ಲಿ ಚಲವಾದಿ, ಚಲ್ವಾಡಿ, ಚನ್ನಯ್ಯ ಉಪಜಾತಿ ಪ್ರತ್ಯೇಕವಾಗಿ ಉಲ್ಲೇಖವಾಗಿದೆ. ಈ ಹಿನ್ನೆಲೆಯಲ್ಲಿ ಬ್ಯಗಾರ, ಹೊಲೆಯ ಮತ್ತು ಮಾಲಾ ಉಪಜಾತಿಗಳಿಗೆ ಚಲವಾದಿಯೊಂದಿಗೆ ಯಾವುದೇ ಕಾನೂನಾತ್ಮ ಕ ಸಂಬಂಧವಿಲ್ಲ ಎಂದು ಅವರು ವಾದಿಸಿದರು.

ಮಾನವಶಾಸ್ತ್ರಜ್ಞ ಸೈಯದ್ ಸಿರಾಜ್ ಉಲ್ ಹಸನ್ ಅವರು 1920ರಲ್ಲಿ ಬರೆದ ''ದಿ ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಹೆಚ್.ಇ.ಹೆಚ್. ನಿಜಾವ್ ಡೊಮಿನಿಯನ್ಸ್'' ಕೃತಿಯಲ್ಲಿ ಮಾಲಾ ಜಂಗಮರು ಮತ್ತು ಚಲವಾದಿ ಸಮುದಾಯ ಒಂದೇ ಎಂದು ಉಲ್ಲೇಖಿಸಿರುವುದಾಗಿ ಹೇಳಿದರು. ರಾಜ್ಯದಲ್ಲಿ ಚಲವಾದಿ ಎಂದರೆ ಮಾಲಾ ದಾಸರು ಅಥವಾ ಮಾಲಾ ಜಂಗಮರು ಮಾತ್ರ ಎಂದು ಅವರು ತಿಳಿಸಿದರು.

ಈ ಕುರಿತು ಮಾರ್ಚ್ 10ರಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗೆ ತಕರಾರು ಅರ್ಜಿ ಸಲ್ಲಿಸಿದ್ದು, ಬ್ಯಗಾರ, ಹೊಲೆಯ ಮತ್ತು ಮಾಲಾ ಸಮುದಾಯದವರು ಚಲವಾದಿ ಹೆಸರಿನಲ್ಲಿ ಪಡೆದಿರುವ ಪರಿಶಿಷ್ಟ ಜಾತಿ ಪ್ರಮಾಣಪತ್ರಗಳನ್ನು ರದ್ದುಪಡಿಸಿ ಮೂಲ ಜಾತಿಯ ಪ್ರಕಾರವೇ ಪ್ರಮಾಣಪತ್ರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಇದಲ್ಲದೆ, ಸಂಬಂಧಿತ ತಹಶೀಲ್ದಾರರು ಚಲವಾದಿ ಹೆಸರಿನಲ್ಲಿ ಈ ಸಮುದಾಯಗಳಿಗೆ ಸಿಂಧುತ್ವ ಪ್ರಮಾಣಪತ್ರ ನೀಡಬಾರದೆಂದು ಸೂಚನೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಪರಿಶಿಷ್ಟ ಜಾತಿಯವರು ಪ್ರಮಾಣಪತ್ರ ಪಡೆಯುವಾಗ ಧರ್ಮದ ಕಾಲಂನಲ್ಲಿ ''ಹಿಂದೂ'' ಎಂದು ನಮೂದಿಸುವುದು ಸೂಕ್ತ ಎಂದು ಸಲಹೆ ನೀಡಿದ ಅವರು, ಬೌದ್ಧ ಧರ್ಮವನ್ನು ಆಯ್ಕೆ ಮಾಡಿದರೆ ಸಂವಿಧಾನದ ಅನುಚ್ಛೇದ 341(1) ಪ್ರಕಾರ ಜಾತಿ ವ್ಯವಸ್ಥೆ ಇಲ್ಲದ ಕಾರಣ ಕೆಲವು ಸೌಲಭ್ಯಗಳಲ್ಲಿ ಗೊಂದಲ ಉಂಟಾಗಬಹುದು ಎಂದು ಹೇಳಿದರು.

ಬ್ಯಗಾರ, ಹೊಲೆಯ ಮತ್ತು ಮಾಲಾ ಸಮುದಾಯದವರಿಗೆ ಗೌತಮ ಬುದ್ಧರ ತತ್ವಗಳ ಮೇಲೆ ನಂಬಿಕೆ ಇದ್ದರೆ ಬೌದ್ಧ ಧರ್ಮಕ್ಕೆ ಮತಾಂತರಗೊಂಡು ಪ್ರವರ್ಗ 2ಎ ಅಡಿಯಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡಾ 15 ಮೀಸಲಾತಿ ಪಡೆಯುವ ಅವಕಾಶವೂ ಇದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಲಾ ಮಹಾಸಭಾ ಕರ್ನಾಟಕದ ಸಂಸ್ಥಾಪಕರು ಹಾಗೂ ಸಂಚಾಲಕರು ಭಾಸ್ಕರ್ ರಾಜ್



ಸಿದ್ದರಾಮ ಜಂಬಲದಿನ್ನಿ ಗ್ರಾಮಸ್ಥರಿಂದ 7ನೇ ವರ್ಷದ ದಾಸೋಹ ಸೇವೆ

ಸಿರವಾರ.ಮಾ.11-

ತಾಲೂಕಿನ ಜಂಬಲದಿನ್ನಿ ಗ್ರಾಮದ ಊರಿನ ಗುರುಹಿರಿಯರು ಹಾಗೂ ಮಲ್ಲಿಕಾರ್ಜುನ ಸ್ವಾಮಿಯ ಸದ್ಭಕ್ತರಿಂದ ಸತತ ಏಳು ವರ್ಷದ ಶ್ರೀಶೈಲ ಪಾದಯಾತ್ರೆ ಗಳಿಗೆ ದಾಸೋಹ ಸೇವೆಯನ್ನು ಕಲ್ಪಿಸಲಾಗಿದೆ. ಕರ್ನೂಲ್ ಜಿಲ್ಲೆಯ ಬಂಕುರ್ ಗ್ರಾಮದಲ್ಲಿ ಗ್ರಾಮದ ಗುರುಹಿರಿಯರು ಯುವಕರಿಂದ ಪ್ರಸಾದ ವ್ಯವಸ್ಥೆಯನ್ನು ಆಂಧ್ರಪ್ರದೇಶದಲ್ಲಿ ವ್ಯವಸ್ಥೆ ಮಾಡಲಾಗಿದೆ.ಅನ್ನದಾನವು ಎಲ್ಲಾ ದಾನಗಳಿಗಿಂತ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ, ಏಕೆಂದರೆ ಹಸಿದವರಿಗೆ ಆಹಾರ ನೀಡುವುದು ಜೀವನವನ್ನು ಉಳಿಸಿದಂತೆ. ಇದು ಅತ್ಯುನ್ನತ ನಿಸ್ವಾರ್ಥ ಸೇವೆ, ಮತ್ತು ಪುಣ್ಯಪ್ರದಾಯಕ ಎಂದು ಪರಿಗಣಿಸಲಾಗಿದೆ. ಎಲ್ಲಾ ಜೀವಿಗಳು ಅನ್ನದಿಂದ ವಿಕಾಸವಾಗುವುದರಿಂದ, ಆಹಾರ ಹಂಚಿ ಕೆಯು ಭಾರತೀಯ ಸಂಸ್ಕೃತಿಯಲ್ಲಿ ಪವಿತ್ರ ಕರ್ತವ್ಯ ವಾಗಿದೆ. ಇಂತಹ ಸೇವೆಯನ್ನು ಸಲ್ಲಿಸುತ್ತಿರುವುದು ನಮಗೆ ಆಶ್ರಿ ಶೈಲ ಮಲ್ಲಿಕಾರ್ಜುನ ಸ್ವಾಮಿ ಆರೋಗ್ಯ ಕೊಟ್ಟು ಹೆಚ್ಚಿನ ಶಕ್ತಿ ನೀಡಲಿ ಎಂದು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಧರ್ಮ ಗ್ರಂಥಕ್ಕಿಂತ ಶ್ರೇಷ್ಠ ಸಂವಿಧಾನ : ರಾಯಪ್ಪ ಹುಣಸಗಿ



ಕಲಬುರಗಿ,ಮಾ.11-

ದೇಶದ ಪ್ರತಿ ಪ್ರಜೆ ಗೌರವಯುತ ಬದುಕಿಗೆ ನಾಂದಿ ಹಾಡಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರಚನೆಯ ಭಾರತದ ಸಂವಿಧಾನವು ಧರ್ಮ ಗ್ರಂಥಕ್ಕಿಂತ ಶ್ರೇಷ್ಠವಾದದ್ದು ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಹೇಳಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕಲಬುರಗಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಮಾಜಿಕ ಮಹಾನ್ ಚಿಂತನೆಗೆ ಗಾನ ನಮನ ಅರ್ಪಿಸುವ ಭೀಮ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತಷ್ಟು ಸದೃಢವಾಗಬೇಕಾದರೆ ಎಲ್ಲರೂ ಸಂವಿಧಾನಕ್ಕೆ ತಲೆಬಾಗಬೇಕು. ಬಲಾಢ್ಯ ಸಂವಿಧಾನ ಇರುವ ಕಾರಣವೇ ಇಂದು ದೇಶ ಪ್ರಗತಿ ಹಾದಿಯಲ್ಲಿ ಸಾಗುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರಾಜ್ಯದ 12 ಆಯ್ದ ಸ್ಥಳಗಳಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಸಾಧನೆ, ಸಮಾನತೆಯ ಹೋರಾಟ, ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀ ಸಮಾನತೆ ಕುರಿತ ಗೀತೆಗಳನ್ನೊಳಗೊಂಡ ಸಮಾನತೆಯ ಸ್ವರ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಿರುವುದು ಪ್ರಸ್ತುತವಾಗಿದೆ.

ಗಾಯನ ಸಂಭ್ರಮಿಸಿದ ವಿದ್ಯಾರ್ಥಿ ಸಮೂಹ :

ಭೀಮನ ಆದರ್ಶಗಳನ್ನು ಸ್ವರಗಳಲ್ಲಿ ಜೀವಂತಗೊಳಿಸುವ ಜಾಗೃತಿ, ಆತ್ಮಗೌರವ ಮತ್ತು ಸಮಾನತೆಯ ಸ್ವರ ಸಂಭ್ರಮದ ಭೀಮ ಗಾಯನವನ್ನು ಚಿಕ್ಕಬಳ್ಳಾಪುರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘವು ನಡೆಸಿಕೊಟ್ಟಿತ್ತು. ಅಂಬೇಡ್ಕರ್ ಅವರ ಜೀವನ ಚರಿತ್ರೆ, ಸಮಾಜದಲ್ಲಿ ಅಡಗಿರುವ ಮೌಢ್ಯನಂಬಿಕೆ ಕಂದಾಚಾರ, ಹೋರಾಟದ ಕುರಿತು ಅನೇಕ ಗೀತೆಗಳನ್ನು ಕಲಾವಿದರು ತುಂಬಾ ಸುಶ್ರಾವ್ಯವಾಗಿ ಹಾಡಿ ಜನರಲ್ಲಿ ಜಾಗೃತಿ ಮೂಡಿಸಿದರು. ಇನ್ನು ಭೀಮನ ಗೀತೆಗಳಿಗೆ, ತಮಟೆ ವಾದನಕ್ಕೆ ವಿದ್ಯಾರ್ಥಿ ಸಮೂಹ ಹೆಜ್ಜೆ ಹಾಕಿ ಸಂಭ್ರಮಿಸಿತು.

ಕಾರ್ಯಕ್ರಮದಲ್ಲಿ ರಾಜ್ಯ ಪತ್ರಿಕಾ ಮಾನ್ಯತಾ ಸಮಿತಿ ಸದಸ್ಯ ಗುರುರಾಜ ಕುಲಕರ್ಣಿ, ಭಾರತೀಯ ದಲಿತ ಫ್ಯಾಂಥರ್ ರಾಜ್ಯಾಧ್ಯಕ್ಷ ಮಲ್ಲಪ್ಪ ಹೊಸಮನಿ, ದಲಿತ ಮುಖಂಡ ಎ.ಬಿ.ಹೊಸಮನಿ, 135ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯೋತ್ಸವ ಜಿಲ್ಲಾ ಸಮಿತಿ ಅಧ್ಯಕ್ಷ ಅಶೋಕ ವೀರಾನಾಯಕ್, ರಾಜ್ಯ ಎಸ್.ಸಿ-ಎಸ್.ಟಿ ಸರ್ಕಾರಿ-ಅರೇ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹೇಶ ಹುಬಳಿ ಸೇರಿದಂತೆ ದಲಿತಪರ ಹಾಗೂ ಇತರೆ ಎಲ್ಲ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸರ್ವರನ್ನು ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

ಸರ್ಕಾರಿ ಶಾಲೆ ಮುಚ್ಚದಂತೆ ಆಗ್ರಹ: ಪರಿಷತ್ ರಾಜ್ಯ ಅಧ್ಯಕ್ಷ ಟಿ.ಎಂ ಶಿವಕುಮಾರ್



ಬಳ್ಳಾರಿ, ಮಾ.11-

ಪಟ್ಟಣದಲ್ಲಿ ಎಐಡಿಎಸ್ಓ ವಿದ್ಯಾರ್ಥಿ ಸಂಘಟನೆ, ವಿವಿಧ ಕಾರ್ಮಿಕ ಸಂಘಟನೆಗಳ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಪ್ರತಿಭಟನಾ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದರು

ರಾಜ್ಯದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ 40,000 ಕ್ಕೂ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ಸರಿಯಲ್ಲ. ₹3,900 ಕೋಟಿ ಅನುದಾನದಲ್ಲಿ 800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ (ಕೆಪಿಎಸ್) ಮೇಲ್ದರ್ಜೆಗೇರಿಸುವ ಸರ್ಕಾರದ ಈ ಹಠಾತ್ ಧೋರಣೆ ಖಂಡನೀಯ ಎಂದರು. ಎಐಡಿಎಸ್ಓ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ ಮಾತನಾಡಿ, ಈ ಬಾರಿಯ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಪಾಲು, ಕಳೆದ ವರ್ಷಕ್ಕೆ ಕುಸಿದಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದರು.

ವಿವಿಧ ಕಾರ್ಮಿಕ ಸಂಘಟನೆಗಳ ಸದಸ್ಯರು ಪಟ್ಟಣದಪುರಸಭೆ ಯಿಂದ ವಿರಕ್ತ ಮಠ ಕಲ್ಯಾಣ ಮಂಟಪದವರೆಗೂ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಎಐಡಿಎಸ್ಓ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷೆ ಎಂ.ಶಾಂತಿ, ವಿವಿಧ ಸಂಘಟನೆಗಳ ಮುಖಂಡರಾದ ಪ್ರಮೋದ್, ಗೋವಿಂದ, ಜಗದೀಶ್, ಅಭಿಲಾಷ, ಕಂಬಳಿ ಮಂಜುನಾಥ, ಬಾಬು, ಹೇಮಾವತಿ ,ರುಕ್ಮಿಣಿ, ನಾಗವೇಣಿ, ಪಾರ್ವತಿ, ಕಾಳಮ್ಮ, ಜ್ಯೋತಿ ಇತರರು ಇದ್ದರು.



ಹೆಣ್ಣು ಸಂಸಾರದ ಕಣ್ಣು: ಸಮಾಜ ಸೇವಕಿ ಭಾಗ್ಯಶ್ರೀ ಸಂಗಮೇಶ

ಬಾಗಲಕೋಟೆ,ಮಾ.11-

ಇಲ್ಲಿನ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಘಟಕದ ಆಶ್ರಯದಲ್ಲಿ ಪೇಟೆ ಭಾಗದ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನೆಯಲ್ಲಿರುವ ಮಕ್ಕಳು ಪಾಲಕರನ್ನು ಅದರಲ್ಲೂ ತಾಯಿಯನ್ನು ಹೆಚ್ಚು ಅನುಕರಣೆ ಮಾಡುವುದರಿಂದ ಅವರಿಗೆ ಸಂಸ್ಕಾರ ಕಲಿಸುವುದರೊಂದಿಗೆ ತಾಯಿಯಾದವಳು ಮಹತ್ವದ ಪಾತ್ರ ನಿರ್ವಹಿಸಬೇಕಿದೆ. ಹೆಣ್ಣು ಸಂಸಾರದ ಕಣ್ಣು ಎಂಬ ಹಿರಿಯರ ಮಾತು ಅಕ್ಷರಶಃ ಸತ್ಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿವಲೀಲಾ ಮಂಗಸೂಳಿ, ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆಯಿರುತ್ತಾಳೆ ಎಂಬಂತೆ, ವೈಯಕ್ತಿಕವಾಗಿಯೂ ಮಹಿಳೆ ಸಬಲೆಯಾಗಬೇಕು ಹಾಗೂ ಸಂಘಟನೆ ಮೂಲಕ ಸಾಮಾಜಿಕವಾಗಿ ಬೆಳೆಯುವ ಅವಶ್ಯಕತೆಯಿದೆ ಎಂದರು.

ಮಹಿಳಾ ಘಟಕ ಅಧ್ಯಕ್ಷೆ ಸುನೀತಾ ಹಂಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೌರವ ಅಧ್ಯಕ್ಷೆ ಕಮಲಕ್ಕ ವಾಲಿ, ಉಪಾಧ್ಯಕ್ಷೆ ಸ್ಮಿತಾ ಅವರಾದಿ, ಪದಾಧಿಕಾರಿಗಳಾದ ಶೈಲಜಾ ಸೊಟ್ಟಿ, ಸವಿತಾ ಮುಚ್ಚಂಡಿ, ಕಲಾವತಿ ಪಟ್ಟಣಶೆಟ್ಟಿ, ಶರ್ಮಿಳಾ ಅವರಾದಿ, ಶೃತಿ ಯಾದವಾಡ, ರೂಪಾ ಪಟ್ಟಣಶೆಟ್ಟಿ, ದೀಪಾ ಮಹಾಬಳಶೆಟ್ಟಿ, ರಾಣಿ ಹಂಜಿ, ಶ್ರೀನಿಧಿ ಪಟ್ಟಣಶೆಟ್ಟಿ, ವಿಜಯಾ ಯಾದವಾಡ, ರೂಪಾ ಮುಚ್ಚಂಡಿ ಇದ್ದರು.



ಕನ್ನಡ ಸಾಹಿತ್ಯ ಪರಿಷತ್ತ ವತಿಯಿಂದ ಮಹಿಳಾ ದಿನಾಚರಣೆಯಂದು ಮಹಿಳಾ ಕವಿಗೋಷ್ಠಿ

ಅಫಜಲಪುರ,ಮಾ.11-

ತಾಲೂಕಿನ ಕನ್ನಡ ಭವನದಲ್ಲಿಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಕವಿಗೋಷ್ಠಿ ಕಾರ್ಯಕ್ರಮವು ಕ.ಸಾ.ಪ ತಾಲೂಕು ಅಧ್ಯಕ್ಷೆ ಶ್ರೀಮತಿ ಪ್ರಭಾವತಿ ಮೇತ್ರೆರವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕ.ಸಾ.ಪ ಗೌರವಾಧ್ಯಕ್ಷ ಬಸಣ್ಣ ಗುಣಾರಿ ಇಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಗಿದ್ದು,ನೂತನವಾಗಿ ಕ.ಸಾ.ಪ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀಮತಿ ಪ್ರಭಾವತಿ ಮೇತ್ರೆರವರ ಪ್ರಥಮ ಕಾರ್ಯಕ್ರಮ ಮಹಿಳಾ ದಿನಾಚರಣೆಯಂದು ನಡೆಯುತ್ತಿರುವುದು ಹೆಣ್ಣು ಮಕ್ಕಳಿಗೆ ಒಂದೊದಗಿದ ಸುದೈವ ಎನ್ನಬಹುದು.ಏಕೆಂದರೆ ಹಿಂದಿನಿಂದ ಇಲ್ಲಿಯವರೆಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಗಂಡು ಮಕ್ಕಳೆ ಆಗಿದ್ದರೂ ಆದರೆ ಈ ಬಾರಿ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಿರುವುದು ಮಹಿಳೆಯರಿಗೆ ನೀಡುವ ಅತ್ಯುನ್ನತ ಗೌರವವಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ ಎಂದರು.

ನಂತರ ಮಾತನಾಡಿದ ಕ.ಸಾ.ಪ ತಾಲೂಕು ಅಧ್ಯಕ್ಷೆ ಪ್ರಭಾವತಿ ಮೇತ್ರೆ ತಾಲೂಕಿನ ಇತಿಹಾಸದಲ್ಲಿ ಮಹಿಳಾ ಕ.ಸಾ.ಪ ಅಧ್ಯಕ್ಷೆಯಾಗಿ ನನ್ನನ್ನು ಆಯ್ಕೆ ಮಾಡಿರುವುದು ನನ್ನ ಅದೃಷ್ಟ ಎಂದು ಭಾವಿಸುತ್ತೇನೆ.ಅದರಲ್ಲೂ ಮಹಿಳಾ ದಿನಾಚರಣೆಯಂದು ನನ್ನ ಅಧ್ಯಕ್ಷತೆಯಲ್ಲಿ ಪ್ರಥಮ ಕಾರ್ಯಕ್ರಮ ಇದಾಗಿರುವುದು ಎಲ್ಲಿಲ್ಲದ ಸಂತಸ ಹಾಗೂ ಹೆಚ್ಚಿನ ಉತ್ಸಾಹ ನೀಡುತ್ತಿದೆ.ತಾಲೂಕಿನಲ್ಲಿ ಮಹಿಳೆಯರು ಸಾಹಿತಿಗಳಾಗಿ ಹೊರಹೊಮ್ಮಲಿ ಎನ್ನುವುದು ನನ್ನ ಮನದಾಸೆಯಾಗಿದ್ದು,ಅಡುಗೆ ಮನೆಗೆ ಸೀಮಿತವಾಗದೆ, ತಮ್ಮಲ್ಲಿರುವ ಜ್ಞಾನವನ್ನು ಮುಖ್ಯಪರದೆಗೆ ತರುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವೇದಿಕೆ ತಮಗಾಗಿ ಯಾವತ್ತೂ ಆಹ್ವಾನಿಸುತ್ತದೆ. ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ಮುಂದೆ ಬರಬೇಕು ಎಂದು ಆಶೀಸಿದರು.

ಇದೆ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಬಸಣ್ಣ ಗುಣಾರಿ,ಸಾಹಿತಿಗಳಾದ ಬಿ.ಎಂ.ರಾವ್,ಕ.ಸಾ.ಪ ತಾಲೂಕು ಅಧ್ಯಕ್ಷೆ ಪ್ರಭಾವತಿ ಮೇತ್ರೆ,ರೇಣುಕಾ ಡಾಂಗೆ,ಅಶ್ವಿನಿ ಕಲಶೆಟ್ಟಿ,ಶ್ರೀದೇವಿ ಪಾಟೀಲ,ಮುರುಘೇಂದ್ರ ಮಸಳಿ,ಸನಾ್ಮನಿತರಾದ ರುಕ್ಮಿಣಿಬಾಯಿ ಹೂಗಾರ,ಶೋಭಾ ಮೋರೆ,ವಿಜಯಲಕ್ಷ್ಮಿ ಅಂಬೂರೆ,ಗುರುಬಾಯಿ ಬಳೂಂಡಗಿ,ಸಾವಿತ್ರಿಬಾಯಿ ಅಂದೊಡಗಿ,ನಂದಾ ಕುಲಕರ್ಣಿ, ಚಿನ್ನುಸಾಬ್ ಮನಿಯಾರ,ಅನೀತಾ ದೊಡ್ಡಮನಿ, ಪ್ರತಿಭಾ ಮಹೇಂದ್ರಕರ,ರೂಪಾ ಸಾಲೂಟಗಿ,ಸೇರಿದಂತೆ ನಿರೂಪಕರಾಗಿ ಪರಮಾನಂದ ಸರಸಂಬಿ,ಸ್ವಾಗತ ಭಾಷಣ ಡಾ.ಸಂಗಣ್ಣ ಸಿಂಗೆ ನೆರವೇರಿಸಿದರು.

ಒಳಮೀಸಲಾತಿ ಅನ್ವಯ ಹುದ್ದೆಗಳ ಭರ್ತಿಗೆ ಒತ್ತಾಯ

ರಾಯಚೂರು,ಮಾ,11-



ಒಳಮೀಸಲಾತಿಯನ್ನು ಸಂಪೂರ್ಣ ಜಾರಿಗೆ ರಾಜ್ಯದ 56 ಸಾವಿರ ಹುದ್ದೆಗಳ ನೇಮಕಾತಿಯಲ್ಲಿ ಒಳ ಮೀಸಲಾತಿ ಅನ್ವಯಿಸಲೇಬೇಕು ಎಂದು ದಲಿತ ಯುವ ಮುಖಂಡರು ಹಾಗೂಕರ್ನಾಟಕ ಜನಸೈನ್ಯ ಜಿಲ್ಲಾಧ್ಯಕ್ಷರಾದ ವೆಂಕಟೇಶ್ ಅರಗೋಲ್ ಅವರು ರಾಜ್ಯ ಸರಕಾರಕ್ಕೆ ಒತ್ತಾಯಿಸಿದರು.

ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ಜಾರಿಗೊಳಿಸದೇ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಬಿಡಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಹಿತ ಕಾಪಾಡದ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ರಾಜೀನಾಮೆ ನೀಡಬೇಕು. ನಮ್ಮ ಸಮುದಾಯದ ನಾಯಕರಾದ ಸಚಿವ ಕೆ.ಎಚ್. ಮುನಿಯಪ್ಪ ಅವರ ವಿರೋಧದ ನಡುವೆಯೂ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸದೇ ವಿವಿಧ ಹುದ್ದೆಗಳ ನೇಮಕಾತಿಗೆ ತೀರ್ಮಾನಿಸಿ, ಆದೇಶ ಹೊರಡಿಸಿರುವ ಸರ್ಕಾರದ ನಿರ್ಧಾರ ಖಂಡನೀಯ ಎಂದರು.ರಾಜ್ಯ ಸರ್ಕಾರ 56,650 ಹುದ್ದೆಗಳ ನೇಮಕಾತಿಯಲ್ಲಿ ಯಾವುದೇ ಕಾರಣಕ್ಕೂ ಒಳ ಮೀಸಲಾತಿಯನ್ನು ಅನ್ವಯಿಸಲೇಬೇಕು.ಶೇ 56 ಮೀಸಲು ಅನ್ವಯ ಪ್ರಕ್ರಿಯೆ ನೇಮಕಾತಿನಡೆಸುವುದಾದರೆ, ಒಳ ಮೀಸಲಾತಿ ಪ್ರಮಾಣವನ್ನು ರಾಜ್ಯಪಾಲರು ಸಹಿ ಮಾಡಿದಂತೆ ಶೇಕಡ 6:6:5 ಅನುಪಾತದ ಮೇಲೆ ನಡೆಸಬೇಕು. ಅಥವಾ ಶೇ 50ರಷ್ಟು ಮೀಸಲಾತಿ ವ್ಯಾಪ್ತಿಯಲ್ಲಿ ಹುದ್ದೆ ನೇಮಕಾತಿ ಮಾಡುವುದಾದರೆ ಒಳಮಿಸಲಾತಿಯನ್ನು 5.50:5.50:

ಆಧಾರದಲ್ಲಿ ನಡೆಸಬೇಕು.

ರಾಜ್ಯ ಸರ್ಕಾರ ಈ ಒಳ ಮೀಸಲಾತಿ ಗೊಂದಲವನ್ನು ಮುಂದಿಟ್ಟುಕೊಂಡು ಒಂದು ಸಮಾಜದ ಮೇಲೆ ಕಳಂಕ ಹಾಕುವ ದುರುದ್ದೇಶದಿಂದ ಈ ಗೊಂದಲ ಸೃಷ್ಟಿಸುತ್ತಿದೆ. ಎಲ್ಲ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ

ಮಹದೇವಪ್ಪ ಅವರು ಒಳಮೀಸಲಾತಿ ದಿಕ್ಕು ತಪ್ಪಿಸುತ್ತಿದ್ದಾರೆ. ಅವರೇ ಮಾದಿಗ ಸಮುದಾಯದ ಶತ್ರು ಆಗಿದ್ದಾರೆ ಗೊತ್ತಾಗಿದೆ ರಾಜ್ಯ ಸರಕಾರ ಒಳಮಿಸಲಾತಿ ಅನ್ವಯ ಹುದ್ದೆಗಳ ಭರ್ತಿಗೆ ಕ್ರಮ ವಹಿಸಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಉಚಿತ ಕಣ್ಣಿನ ತಪಾಸಣೆ

ಮಸ್ಕಿ,ಮಾ.11-



ತಾಲೂಕಿನ ಮೆದಿಕಿನಾಳ ವಲಯದ ಮೆದಕಿನಾಳ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ರಾಜಣ್ಣ ಪರಡ್ಡಿ ಹಾಗೂ ವೈದ್ಯಾಧಿಕಾರಿಗಳಾದ ಆನಂದ್ ಸರ್ ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರಾದ ರಾಜಣ್ಣ ಪರಡ್ಡಿ ಇವರು ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಜ್ಞಾನ ವಿಕಾಸ ಕಾರ್ಯಕ್ರಮದಿಂದ ಮಹಿಳೆಯರಿಗೆ ಆಗುವ ಪ್ರಯೋಜನ ಗಳ ಬಗ್ಗೆ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು.

ವೈದ್ಯಾಧಿಕಾರಿಗಳಾದ ಆನಂದ್ ಸರ್ ಐ ದೃಷ್ಟಿ ಆಸ್ಪತ್ರೆ ಕಣ್ಣಿನ ಸಂರಕ್ಷಣೆ ಕಣ್ಣಿನ ಸಂರಕ್ಷಣೆಯಲ್ಲಿ ಸೇವನೆ ಮಾಡಬಹುದಾದ ಆಹಾರ ದೂಳು ಮತ್ತು ಅತಿ ಬಿಸಿಲಿನಿಂದ ಕಣ್ಣಿನ ರಕ್ಷಣೆಯ ಕುರಿತು ಮಾಹಿತಿ ನೀಡಿದರು.

ಈ ತಪಾಸಣಾ ಶಿಬಿರದಲ್ಲಿ ಬಿಪಿ ಶುಗರ್ ಕೂಡ ಚೆಕಪ್ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಅರೋಗ್ಯ ಸಲಹೆ ಗಾರರಾದ ಮೀನಾ,, ವಿನೋದ್, ಮಾಧವ ಸುರೇಶ್, ಬಸವರಾಜ್, ಹಾಗೂ ವಲಯದ ಮೇಲ್ವಿಚಾರಕರು ಪ್ರಸನ್ನ ಸರ್ , ನಿರಂಜನ್ ಸರ್ , ಜ್ಞಾನವಿಕಾಸ ಸಮನ್ವಯಧಿಕಾರಿ ರೇಖಾ ಮೇಡಂ, ಸೇವಾಪ್ರತಿನಿಧಿ ಶರಣಮ್ಮ, ನಾಗರತ್ನ,ತ್ರಿವೇಣಿ, ಪವಿತ್ರ,ಹಾಗೂ ಸ್ವಸಹಾಯ ಸಂಘದ ಸರ್ವ ಸದಸ್ಯರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಹೆಡೆಯೆತ್ತಿ ಪೂತ್ಕರಿಸುತ್ತಿರುವ ಬಹುಸಂಖ್ಯಾತವಾದದ ಬೇರುಗಳನ್ನು ಗುರುತಿಸಿದ್ದರು ಪಣಿಕ್ಕರ್

ಹರಡಿ ಹಬ್ಬುತ್ತಿರುವ ಬಹುಸಂಖ್ಯಾತವಾದವು ಕೇವಲ ರಾಜಕೀಯ ಪ್ರವೃತ್ತಿ ಮಾತ್ರವಾಗಿರದೆ, ವ್ಯಾಪಕ ಸೈದ್ಧಾಂತಿಕ ಯೋಜನೆಯಾಗಿದೆ. ಅದು ಸಂಸ್ಥೆಗಳನ್ನು ಶಿಕ್ಷಣ ವ್ಯವಸ್ಥೆಗಳನ್ನು ಹಾಗೂ ಸಾಂಸ್ಕೃತಿಕ ನಿರೂಪಣೆಗಳನ್ನು ಪ್ರಭಾವಿಸುತ್ತಿದೆ ಎಂದಿದ್ದ ಇತಿಹಾಸ ವಿದ್ವಾಂಸ ಕೆ ಎನ್ ಪಣಿಕ್ಕರ್ ಅವರ ಭವಿಷ್ಯ ಸಮಕಾಲೀನ ನಿಜ ರೂಪ ಧರಿಸಿ ಗಹಗಹಿಸಿದೆ.

ಆಧುನಿಕ ಇತಿಹಾಸದ ಅಗ್ರಗಣ್ಯ ವಿದ್ವಾಂಸರಲ್ಲಿ ಒಬ್ಬರೆನಿಸಿದ್ದ ಕೆ ಎನ್ ಪಣಿಕ್ಕರ್ ಇನ್ನಿಲ್ಲವಾಗಿದ್ದಾರೆ. ಧರ್ಮ, ವಸಾಹತುವಾದ, ಸಂಸ್ಕೃತಿ, ರೈತ ಚಳವಳಿ, ಇತಿಹಾಸಶಾಸ್ತ್ರ ಕುರಿತು ಅವರು ಬರೆದಿರುವ ಪುಸ್ತಕಗಳು ಮತ್ತು ಪ್ರಬಂಧಗಳು ಚಿರಸ್ಥಾಯಿ. ಕೇರಳದ ಮಲಬಾರ್ ಸೀಮೆ, ವಸಾಹತು ಅಧಿಕಾರ ಸಂರಚನೆಗಳು, ರೈತ ಬಂಡಾಯಗಳ ಕುರಿತ ಅವರ ಒಳನೋಟದ ಬರೆಹಗಳಿಲ್ಲದೆ ಆಧುನಿಕ ಇತಿಹಾಸ ಶಾಸ್ತ್ರ ಅಪೂರ್ಣ. ಜಮೀನ್ದಾರೀ ವ್ಯವಸ್ಥೆ ಮತ್ತು ಅದರ ವಿರುದ್ಧ ಸಿಡಿದ ರೈತ ಬಂಡಾಯ ಹಾಗೂ ವಸಾಹತು ಶಕ್ತಿಗಳ ಕುರಿತು ಅವರು ಬರೆದ : (1836-1921) ಕೃತಿ ಮೈಲುಗಲ್ಲು. ಘಟನಾವಳಿ ಕುರಿತು ಪಣಿಕ್ಕರ್ ಅವರು ಮಾಡಿದ ವ್ಯಾಖ್ಯಾನಗಳು ವಿಸ್ತೃತ ವಿದ್ವತ್ಪೂರ್ಣ ಚರ್ಚೆಗೆ ದಾರಿ ಮಾಡಿದ್ದುಂಟು. ಅವರು ಕೃತಿಕಾರ ಪ್ರೊಫೆಸರ್ ಮಾತ್ರ ಆಗಿರಲಿಲ್ಲ, ಪ್ರಗತಿಪರ ಆಂದೋಲನಗಳ ಹೋರಾಟಗಾರರೂ ಆಗಿದ್ದರು.

ಎಂಬುದು ಅವರು ಬಾಬರಿ ಮಸೀದಿ ನೆಲಸಮದ ನಂತರ ಅವರು ಸಂಪಾದಿಸಿದ್ದ ಕೃತಿ. ಹಿಂದುತ್ವವು ರಾಜಕೀಯ ಮತ್ತು ಶೈಕ್ಷಣಿಕ ಸಂವಾದಗಳಲ್ಲಿ ನಿಧಾನವಾಗಿ ಮತ್ತು ನಿಶ್ಚಿತವಾಗಿ ಬೇರು ಬಿಡುತ್ತಿದ್ದ ಕಾಲಘಟ್ಟದಲ್ಲಿ ಬಂದಿದ್ದ ಕೃತಿಯಿದು. ಮಹತ್ವದ ಹಸ್ತಕ್ಷೇಪವಾಗಿತ್ತು. ಕೋಮುವಾದವೆಂಬುದು ತನ್ನ ಬಳ್ಳಿಗಾಲುಗಳನ್ನು ಸಾರ್ವಜನಿಕ ಬದುಕಿನಲ್ಲಿ, ರಾಜಕಾರಣದಿಂದ ಹಿಡಿದು ಶಿಕ್ಷಣದ ತನಕ ಹಾಗೂ ನಿತ್ಯ ಬದುಕಿನ ಸಾಮಾಜಿಕ ಸಂಬಂಧಗಳಲ್ಲಿ ಹೇಗೆಲ್ಲ ಹರಡುತ್ತಲಿದೆ ಮತ್ತು ಕಾರ್ಯನಿರತವಾಗಿದೆ ಎಂಬುದನ್ನು ಗ್ರಹಿಸಲು ಓದುಗರಿಗೆ ತೀವ್ರವಾಗಿ ನೆರವಾದ ಸಂಪುಟ.

ಇತಿಹಾಸವನ್ನು ಭಾರತೀಯ ದೃಷ್ಟಿಕೋನದಿಂದ ಮರುರಚಿಸಬೇಕಿದೆ. ವಸಾಹತುಶಾಹಿ ದೃಷ್ಟಿಕೋನವು ದೇಶದ ಚರಿತ್ರೆಯನ್ನು ದಾಖಲಿಸುವಾಗ ಭಾರತೀಯ ದನಿಯನ್ನು ಇಡಿಯಾಗಿ ನಿರ್ಲಕ್ಷಿಸಿದೆ. ದೇಶದ ಇತಿಹಾಸದಲ್ಲಿ ದಮನಿತರನ್ನು ಅಂಚಿಗೆ ತಳ್ಳುತ್ತಲೇ ಬಂದಿರುವುದನ್ನು ನಿರಂತರವಾಗಿ ಪ್ರಶ್ನಿಸಬೇಕು. ಈ ಪ್ರಶ್ನೆಗೆ ದೊರೆಯುವ ಉತ್ತರಗಳು ಸಂಶೋಧನೆಯನ್ನು ಹೆಚ್ಚು ರೋಮಾಂಚಕಗೊಳಿಸುತ್ತವೆ. ಇತಿಹಾಸವನ್ನು ವಸಾಹತುಶಾಹಿ ಕಣ್ಣೋಟವನ್ನು ಪ್ರಶ್ನಿಸುತ್ತಿರಬೇಕು ಎಂದು ಅವರು ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

ಬ್ರಿಟಿಷರ ವಿರುದ್ಧ ಸಾಂಸ್ಕೃತಿಕ ಪ್ರತಿರೋಧವಿತ್ತು ಎಂಬುದನ್ನು ಜನರಿಗೆ ಯಾರೂ ಹೇಳಿಲ್ಲ. ಈ ಪ್ರತಿರೋಧವು ಬ್ರಿಟಿಷ್ ವಿಧಿ ನಿಯಮಗಳನ್ನು ತಿರಸ್ಕರಿಸಿತ್ತು. ಭಾರತ ನಿಜದನಿಯನ್ನು ಕಂಡುಕೊಳ್ಳಬೇಕು. ದಮನಿತರ ಪ್ರತಿರೋಧದ ಚರಿತ್ರೆಯನ್ನು ಹೊರತರಬೇಕಿದೆ ಎಂದಿದ್ದರು.

ಮಹಿಳೆಯರು, ಪರಿಸರ, ಕೋಮುವಾದ, ಜಾತ್ಯತೀತವಾದ ಹಾಗೂ ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ಜನವರ್ಗಗಳ ವಿಷಯಗಳಿಗೆ ಸುದ್ದಿ ಪತ್ರಿಕೆಗಳು ಮುಖಾಮುಖಿ ಆಗಿಯೇ ಇಲ್ಲ ಎಂಬುದು ಅವರ ದೂರಾಗಿತ್ತು. ಸಮಾಜದ ಮೇಲೆ ಅಗಾಧ ಪರಿಣಾಮ ಬೀರಬಲ್ಲ ಪತ್ರಿಕೆಗಳು ಇಂತಹ ವಿಷಯಗಳ ಕುರಿತು ತಳೆದಿರುವ ಮೌನವನ್ನು ಅವರು ಪ್ರಶ್ನಿಸಿದ್ದರು. ಪತ್ರಿಕೆಗಳು ಸರಿತಪ್ಪುಗಳನ್ನು ಚರ್ಚಿಸಬೇಕು. ಆದರೆ, ವೃತ್ತಪತ್ರಿಕೆಗಳು (ಮೀಡಿಯಾ) ಒಂದು ವೇಳೆ ಮಧ್ಯಪ್ರವೇಶ ಮಾಡಿದರೆ. ಅದು ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿಯೇ ಇರುತ್ತದೆ. ಸುದ್ದಿ ಮತ್ತು ಅಭಿಪ್ರಾಯದ ನಡುವಣ ಭೇದವೇ ಅಳಿಸಿಹೋಗುತ್ತಿದೆ. ಮೀಡಿಯಾದ ವಿಶ್ವಾಸಾರ್ಹತೆ ನಶಿಸಿ ಹೋಗುತ್ತಿರುವ ಅಪಾಯಕಾರಿ ಬೆಳವಣಿಗೆಯು ಸಮಾಜದ ಮೇಲೆ ಗಾಢ ಪ್ರಭಾವ ಬೀರುತ್ತದೆ. ಮೀಡಿಯಾವನ್ನು ವಿಮರ್ಶಿಸಲು ಕೌಂಟರ್ ಮೀಡಿಯಾ ಇರಬೇಕು. ಮೀಡಿಯಾವನ್ನು ಸರಿದಾರಿಗೆ ತರಲು ಕೌಂಟರ್ ಮೀಡಿಯಾ ಸ್ಥಾಪನೆಯ ಪರಿಹಾರ ಎಂದಿದ್ದರು.

ದೇಶದ ಕೋಮುವಾದಿ ಇತಿಹಾಸಶಾಸ್ತ್ರವು ನಮ್ಮ ಜಾತ್ಯತೀತ ಪರಂಪರೆಯನ್ನು ತಿರಸ್ಕರಿಸಿದೆ. ಸಂಸ್ಕೃತಿ ಎಂಬುದು ಸಂಘರ್ಷದ ಕಣವಾಗಿ ಹೋಗಿದೆ. ಕೋಮುವಾದದ ಪ್ರತಿಪಾದಕರು ಇತಿಹಾಸಕಾರರ ಮುಖವಾಡ ಧರಿಸಿ ತಿರುಗುತ್ತಿದ್ದಾರೆ. ಭಾರತೀಯ ನಾಗರಿಕತೆಯ ಸೆಕ್ಯೂಲರ್ ಪರಂಪರೆಯನ್ನು ಕಳಂಕಿತಗೊಳಿಸುತ್ತಿದ್ದಾರೆ. ಈ ರೀತಿಯಾಗಿ ಭಾರತೀಯ ಇತಿಹಾಸಶಾಸ್ತ್ರವು ಸೆಕ್ಯೂಲರ್ ಮತ್ತು ಕೋಮುವಾದಿ ವ್ಯಾಖ್ಯಾನಗಳ ನಡುವಣ ಸಂಘರ್ಷದ ಕಣವಾಗಿ ಮಾರ್ಪಟ್ಟಿದೆ. ವಸಾಹತುವಾದಿ ಮತ್ತು ನವವಸಾಹತುವಾದಗಳ ಸೈದ್ಧಾಂತಿಕ ಪ್ರಭಾವವು ಈಗಲೂ ಅಳಿದಿಲ್ಲ. ಈ ಚರಿತ್ರೆಗಳು ವಸಾಹತುವಾದಿ ದಮನದ ವಾಸ್ತವತೆಯನ್ನು ಮರೆ ಮಾಡಿಬಿಟ್ಟಿವೆ. ಕೋಮುವಾದಿ ವ್ಯಾಖ್ಯಾನಗಳು ಸೆಕ್ಯೂಲರ್ ಪರಂಪರೆಯನ್ನು ಕಡೆಗಣಿಸಿವೆ. ಸಂಸ್ಕೃತಿಯ ಯಜಮಾನಿಕೆಯ ಸ್ವರೂಪವು ಶೋಷಣಾತ್ಮಕ ವ್ಯವಸ್ಥೆಯನ್ನು ಸಮರ್ಥಿಸಿರುವುದಲ್ಲದೆ, ಅದನ್ನು ಹಾಗೆಯೇ ಕಾಪಾಡಿಕೊಂಡು ಹೋಗುತ್ತಿದೆ. ಸಂಸ್ಕೃತಿಯು ಪ್ರತಿರೋಧದ ಮೂಲವಾಗಬೇಕಿದೆ. ಅಂತಹ ರೂಪವನ್ನು ಸಂಸ್ಕೃತಿಯು ತಳೆಯಬೇಕಿದೆ. ಸಂಸ್ಕೃತಿ ಮತ್ತು ಧರ್ಮವನ್ನು ಒಟ್ಟಿಗೆ ಇಟ್ಟು ಅಸ್ಮಿತೆಯನ್ನು ಗುರುತಿಸಬೇಕಿದೆ. ಈ ಸಂಬಂಧದ ಮೂಲಕವೇ ದೇಶದ ವ್ಯಾಖ್ಯೆಯನ್ನು ಕಟ್ಟಬೇಕಿದೆ. ವಾಸ್ತವಾಂಶಗಳನ್ನು ತಿರುಚಿ ತಪ್ಪಾಗಿ ಪ್ರತಿನಿಧಿಸುವ ಪಠ್ಯಪುಸ್ತಕಗಳ ಮೂಲಕ ಅಥವಾ ಅಂತಹ ಸಂಶೋಧನೆಗಳ ಮೂಲಕ ಇತಿಹಾಸವನ್ನು ತಿರುಚಲಾಗುತ್ತಿದೆ. ಸಂಸ್ಕೃತಿಯನ್ನು ಸೆಕ್ಯೂಲರ್ ಆಚರಣೆಯಾಗಿ ಕಂಡವರು ಮತ್ತು ಅದನ್ನು ಧರ್ಮದೊಂದಿಗೆ ಗುರುತಿಸಿದವರ ನಡುವೆ ಸಂಘರ್ಷ ನಡೆದಿದೆ. ಮಾರ್ಕ್ಸವಾದಿ ಇತಿಹಾಸ ಶಾಸ್ತ್ರದಲ್ಲಿ ಸಂಸ್ಕೃತಿಯ ಅಧ್ಯಯನಕ್ಕೆ ಸಾಕಷ್ಟು ಗಮನ ನೀಡದಿರುವುದು, ಸಂಸ್ಕೃತಿಯ ಅಧ್ಯಯನವನ್ನು ಕೋಮುವಾದಿಗಳು ಮತ್ತು ಸಾಮ್ರಾಜ್ಯಶಾಹಿಗಳು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಸಲೀಸಾಗಿ ಹೋಗಿದೆ ಎಂಬುದು ಅವರ ನಿಲುವಾಗಿತ್ತು.

ಪಣಿಕ್ಕರ್ ಅವರು ದೇಶದ ಅತ್ಯಂತ ವಿಶಿಷ್ಟ ಇತಿಹಾಸಕಾರರಾಗಿದ್ದಂತೆ, ಶಿಕ್ಷಣ ತಜ್ಞರು ಮತ್ತು ಸಾರ್ವಜನಿಕ ಬುದ್ಧಿಜೀವಿಯೂ ಆಗಿದ್ದರು. ಬಹುಸಂಖ್ಯಾತವಾದಿ ರಾಜಕಾರಣದ ವಿರುದ್ಧ ನಿರಂತರವಾಗಿ ದನಿ ಎತ್ತಿದವರಾಗಿದ್ದರು. ಇತಿಹಾಸವನ್ನು ಸೈದ್ಧಾಂತಿಕ ಉದ್ದೇಶಗಳಿಗಾಗಿ ತಿರುಚುವ ಪ್ರಯತ್ನಗಳು ಹೆಚ್ಚುತ್ತಲೇ ಹೋಗಿದ್ದನ್ನು ಅವರ ಬರವಣಿಗೆಯು ಮುಖಾಮುಖಿಯಾಗಿತ್ತು. ಪುರಾಣಗಳನ್ನು ಐತಿಹಾಸಿಕ ವಾಸ್ತವಾಂಶಗಳೆಂದು ಪ್ರತಿಬಿಂಬಿಸುವ ಪ್ರವೃತ್ತಿಯ ಕುರಿತು ಅವರು ತೀವ್ರ ಆತಂಕಕ್ಕೆ ಈಡಾಗಿದ್ದರು. ಈ ಕುರಿತು ಮತ್ತೆ ಮತ್ತೆ ಎಚ್ಚರಿಸಿದರು. ಪುರಾವೆಗಳ ಆಧಾರವಿರುವ ಚರಿತ್ರೆಯನ್ನು ಬದಿಗೆ ತಳ್ಳಿ ಆ ಜಾಗದಲ್ಲಿ ಪೌರಾಣಿಕ ಮಿಥ್ಯೆಗಳ ಸ್ಥಾಪನೆಯ ಅಪಾಯದತ್ತ ಅವರು ಗಮನ ಸೆಳೆದಿದ್ದರು. ಇತಿಹಾಸಕ್ಕೆ ರೂಪು ನೀಡುವ ಸಂಕೀರ್ಣ ಸಾಮಾಜಿಕ ಸಂಬಂಧಗಳು ಮತ್ತು ಆರ್ಥಿಕ ಶಕ್ತಿಗಳನ್ನು ಅವಗಣಿಸುವ ಪ್ರವೃತ್ತಿ ಅಪಾಯಕರ. ಇಂತಹ ವಿರೂಪಗಳು ವಿದ್ವತ್ತನ್ನು ಕಡೆಗಣಿಸುವುದೇ ಅಲ್ಲದೆ ಜನತಾಂತ್ರಿಕ ಸಂವಾದವನ್ನು ಬಲಹೀನಗೊಳಿಸುವ ಅಪಾಯದ ಗಂಟೆಯನ್ನು ಮೊಳಗಿಸಿದ್ದರು ಪಣಿಕ್ಕರ್.

ಇತಿಹಾಸಕ್ಕೆ ಸಂಬಂಧಿಸಿದ ಬರವಣಿಗೆಯು ವಸ್ತುನಿಷ್ಠವೂ ವೈಜ್ಞಾನಿಕವೂ ಆಗಿದ್ದು, ತಾಳೆ ನೋಡಿ ಪರಿಶೀಲಿಸಬಹುದಾದ ಪುರಾವೆಗಳನ್ನು ಆಧರಿಸಿರಬೇಕು. ಅದರೆ, ಅಂತಹ ವಿದ್ವತ್ತಿಗೆ ಪೂರಕವಾದ ಬೌದ್ಧಿಕ ವಾತಾವರಣ ಅತ್ಯಗತ್ಯ. ಭಯ ಅಥವಾ ಹಸ್ತಕ್ಷೇಪಗಳಿಲ್ಲದೆ ವಿಮರ್ಶಾತ್ಮಕ ಅನ್ವೇಷಣೆಯಲ್ಲಿ ತೊಡಗಬಹುದಾದ ವಾತಾವರಣ ಚರಿತ್ರಕಾರರಿಗೆ ಬಹುಮುಖ್ಯ. ತನ್ನ ಸೈದ್ಧಾಂತಿಕ ಕಾರ್ಯಸೂಚಿಗೆ ತಕ್ಕಂತೆ ಚರಿತ್ರೆಯನ್ನು ಎರಕ ಹೊಯ್ಯುವ ಸರ್ಕಾರದ ಯಾವುದೇ ಪ್ರಯತ್ನವು ಅಕೆಡಮಿಕ್ ಸ್ವಾತಂತ್ರ್ಯ ಮತ್ತು ಜನತಾಂತ್ರಿಕ ಮೌಲ್ಯಗಳಿಗೆ ಗಂಭೀರ ಗಂಡಾಂತರ ತರುತ್ತದೆ ಎಂದಿದ್ದ ಅವರ ಮಾತುಗಳು ಇಂದಿನ ಭಾರತದಲ್ಲಿ ಕಟುವಾಸ್ತವಗಳಾಗಿ ಧ್ವನಿಸಿವೆ.

ಹರಡಿ ಹಬ್ಬುತ್ತಿರುವ ಬಹುಸಂಖ್ಯಾತವಾದವು ಕೇವಲ ರಾಜಕೀಯ ಪ್ರವೃತ್ತಿ ಮಾತ್ರವಾಗಿರದೆ, ವ್ಯಾಪಕ ಸೈದ್ಧಾಂತಿಕ ಯೋಜನೆಯಾಗಿದೆ. ಅದು ಸಂಸ್ಥೆಗಳನ್ನು ಶಿಕ್ಷಣ ವ್ಯವಸ್ಥೆಗಳನ್ನು ಹಾಗೂ ಸಾಂಸ್ಕೃತಿಕ ನಿರೂಪಣೆಗಳನ್ನು ಪ್ರಭಾವಿಸುತ್ತಿದೆ ಎಂದಿದ್ದ ಅವರ ಭವಿಷ್ಯ ನಿಜ ರೂಪ ಧರಿಸಿ ಗಹಗಹಿಸಿದೆ.

ಇತಿಹಾಸವೆಂಬುದು ಗತಕಾಲದ ದಾಖಲೆ ಮಾತ್ರವಲ್ಲ, ವರ್ತಮಾನದ ಮೌಲ್ಯತತ್ವಗಳನ್ನು ರೂಪಿಸುವ ಸಂಗತಿಯೂ ಹೌದು ಎಂಬ ಸತ್ಯವನ್ನು ಅವರ ಕೃತಿಗಳು ಎತ್ತಿ ಹಿಡಿದಿವೆ. ಮಲಬಾರ್ ಬಂಡಾಯದ ಕುರಿತ ಅವರ ಬರವಣಿಗೆಯು ಇತಿಹಾಸದ ಘಟನೆಗಳನ್ನು ಸೈದ್ಧಾಂತಿಕ ವ್ಯಾಖ್ಯಾನಗಳಿಗಿಂತ ಭೌತಿಕ ವಾಸ್ತವಗಳ ವಿಶ್ಲೇಷಣೆಯಾಗಿರಬೇಕು ಎಂಬುದಕ್ಕೆ ಅವರ : , 18361921 ಕೃತಿಯೇ ಸಾಕ್ಷಿ. ಈ ಬಂಡಾಯವನ್ನು ಹಿಂದುತ್ವವಾದಿಗಳು ಶುದ್ಧಾಂಗವಾಗಿ ಕೋಮುವಾದಿ ದಂಗೆಯೆಂದು ಬಣ್ಣಿಸುತ್ತವೆ. ಪಣಿಕ್ಕರ್ ಈ ಬಣ್ಣನೆಯನ್ನು ಪ್ರಶ್ನಿಸಿದರು ಮತ್ತು ಸವಾಲೆಸೆದರು. ಈ ಬಂಡಾಯದ ಬೇರುಗಳು ಕೃಷಿ ಬಿಕ್ಕಟ್ಟಿನ ಕುದಿಯಲ್ಲಿ ಅಡಗಿದ್ದವು, ಆರ್ಥಿಕ ದಾರಿದ್ರ್ಯದಲ್ಲಿ ಹಾಗೂ ವಸಾಹತುವಾದಿ ಆಡಳಿತದ ಜಮೀನ್ದಾರಿ ಪದ್ಧತಿಯ ದಬ್ಬಾಳಿಕೆಯ ಸಂರಚನೆಯಲ್ಲಿದ್ದವು ಎಂದು ವಾದಿಸಿದರು. ಈ ಬಂಡಾಯವನ್ನು ಕೇವಲ ಕೋಮುವಾದಿ ಘರ್ಷಣೆ ಎಂದು ಕರೆಯಲಾಗದು. ಆರ್ಥಿಕ ಶೋಷಣೆ, ಕೃಷಿ ಸಮಸ್ಯೆಗಳು ಹಾಗೂ ವಸಾಹತುವಾದಿ ಶಕ್ತಿಗಳ ಅನ್ಯೋನ್ಯ ಸಂಬಂಧದ ಕ್ರಿಯೆಗೆ ಹುಟ್ಟಿದ ಪ್ರತಿಕ್ರಿಯೆ ಆಗಿತ್ತು. ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವ ಮತ್ತು ಜಮೀನ್ದಾರರ ವಿರುದ್ಧ ಹುಟ್ಟಿದ ಹೋರಾಟವಾಗಿತ್ತು ಎಂಬ ಅವರ ವಿಶ್ಲೇಷಣೆ ಸತ್ಯಕ್ಕೆ ಅತಿ ಸನಿಹವಾಗಿತ್ತು.

ಸಮಕಾಲೀನ ಭಾರತದಲ್ಲಿ ಬಹುಸಂಖ್ಯಾತವಾದ ತಲೆಯತ್ತಿದ ಮತ್ತು ನವಉದಾರವಾದ ಹುಟ್ಟಿದ ಬೆಳವಣಿಗೆಗಳ ನಡುವಿನ ಕೊಂಡಿಯತ್ತ ಅವರು ಗಮನ ಸೆಳೆದಿದ್ದರು. ಈ ಬೆಳವಣಿಗೆಗಳು ಶೂನ್ಯದಲ್ಲಿ ಉದ್ಭವಿಸಿದ ವಿದ್ಯಮಾನಗಳಾಗಿರದೆ ಸಮಾಜದ ಸಂರಚನೆಯಲ್ಲಿ ಉಂಟಾದ ವಿಸ್ತೃತ ಬದಲಾವಣೆಯಾಗಿದ್ದವು ಎಂದು ಗುರುತಿಸಿದ್ದರು.

ಪ್ರಬಲ ಪ್ರಧಾನ ಅಧಿಪತ್ಯದ ಸಿದ್ಧಾಂತವಾಗಿ ತಲೆಯೆತ್ತಿದ ಬಹುಸಂಖ್ಯಾತವಾದವನ್ನು ಅದರ ವಿಸ್ತೃತ ರಾಜಕೀಯ, ಸಾಂಸ್ಕೃತಿಕ ಹಾಗೂ ಆರ್ಥಿಕ ಪರಿಸ್ಥಿತಿಗಳ ಸಂಯೋಗವಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹೊಮ್ಮಿತು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ. ಆರ್ಥಿಕ ರೂಪಾಂತರಗಳು, ರಾಜಕೀಯ ಅಧಿಕಾರದ ಪಲ್ಲಟಗಳು ಹಾಗೂ ಸಾಂಸ್ಕೃತಿಕ ಕಥಾನಕಗಳಿಗೆ ನೀಡಿದ ಮರುರೂಪಗಳು ಸೇರಿ ಸಾರ್ವಜನಿಕ ಬದುಕಿನಲ್ಲಿ ಬಹುಸಂಖ್ಯಾತವಾದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿದವು ಮತ್ತು ಬಹುಸಂಖ್ಯಾತವಾದಕ್ಕೆ ಸಾರ್ವಜನಿಕ ಬದುಕಿನಲ್ಲಿ ಹೆಚ್ಚು ಹೆಚ್ಚು ನ್ಯಾಯಸಮ್ಮತಿಯನ್ನು ಗಳಿಸಿಕೊಟ್ಟವು ಎಂಬುದು ಅವರ ಅತ್ಯಂತ ಮೌಲಿಕ ವಿಶ್ಲೇಷಣೆ.

ಭಾರತದ ದಮನಿತ ಸಮುದಾಯಗಳು ತಮ್ಮ ಪ್ರಬಲ ಪ್ರತಿಪಾದಕನೊಬ್ಬನನ್ನು, ಭಾರತೀಯ ಸಾರ್ವಜನಿಕ ಬದುಕು ಒಬ್ಬ ಪ್ರಖರ ಜಾತ್ಯತೀತವಾದಿಯನ್ನು, ಹೊಳಪಿನ ವಿಚಾರವಂತನನ್ನು ಕಳೆದುಕೊಂಡಿವೆ.

ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳ ನಂತರ ಎಚ್ಚೆತ್ತ ಎಪಿಪಿ ಸರ್ಕಾರ! ಮಹಿಳೆಯರ ಖಾತೆಗೆ ಹಣ

ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ವಿದ್ಯಾರ್ಥಿನಿಯರಿಗೆ ಸುಲಭ ಸಂಚಾರ ಸೌಲಭ್ಯ ಒದಗಿಸುವಂತಹ ಕ್ರಮಗಳ ಮೂಲಕ ಸರ್ಕಾರಗಳು ಮಹಿಳಾ ಸಬಲೀಕರಣದತ್ತ ಹೆಚ್ಚು ಗಮನ ಹರಿಸುತ್ತಿವೆ.

ಮಹಿಳಾ ಸಬಲೀಕರಣ ಮತ್ತು ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ದೇಶದ ವಿವಿಧ ರಾಜ್ಯ ಸರ್ಕಾರಗಳು ಹಲವು ಕಲ್ಯಾಣ ಯೋಜನೆಗಳನ್ನು ಘೋಷಿಸುತ್ತಿವೆ. ಇಂತಹ ಯೋಜನೆಗಳು ಮಹಿಳೆಯರಿಗೆ ಆರ್ಥಿಕ ಭದ್ರತೆ ಒದಗಿಸುವುದರ ಜೊತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತವೆ. ಸಮಾಜದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದರೆ ಮಾತ್ರ ಸಮಾನತೆ ಮತ್ತು ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಸರ್ಕಾರಗಳು ಮಹಿಳಾ ಕೇಂದ್ರಿತ ಯೋಜನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿರುವುದು ಗಮನಾರ್ಹವಾಗಿದೆ.



ಕರ್ನಾಟಕದಲ್ಲಿ ಜಾರಿಗೆ ತಂದಿರುವ ಗ್ಯಾರೆಂಟಿಗಳು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳಾಗಿ ಪರಿಗಣಿಸಲ್ಪಟ್ಟಿವೆ. ಮಹಿಳೆಯರಿಗೆ ನೇರ ಹಣಕಾಸು ನೆರವು, ಉಚಿತ ಸೇವೆಗಳು ಮತ್ತು ಸಾಮಾಜಿಕ ಭದ್ರತೆ ಒದಗಿಸುವಂತಹ ಕ್ರಮಗಳು ಅವರ ಜೀವನಮಟ್ಟವನ್ನು ಸುಧಾರಿಸಲು ನೆರವಾಗುತ್ತಿವೆ. ಇದೇ ರೀತಿಯ ಯೋಚನೆಯಲ್ಲಿಯೇ ಪಂಜಾಬ್‌ನಲ್ಲಿ ಮಹಿಳಾ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಜಾರಿಗೆ ತರುವ ಭರವಸೆಯನ್ನು ಆಮ್ ಆದ್ಮಿ ಪಾರ್ಟಿ ತನ್ನ ಚುನಾವಣಾ ಪ್ರಚಾರದ ವೇಳೆ ನೀಡಿತ್ತು. ಆದರೆ, ಪಂಜಾಬ್‌ನಲ್ಲಿ ಆಪ್ ಸರ್ಕಾರ ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳ ಬಳಿಕ ಮಹಿಳೆಯರ ಖಾತೆಗಳಿಗೆ ಹಣ ವರ್ಗಾವಣೆ ಮಾಡುವ ಯೋಜನೆಯನ್ನು ಜಾರಿಗೆ ತರಲು ಮುಂದಾಗಿದೆ.

ಹೌದು, ಮುಖ್ಯಮಂತ್ರಿ ಮಾವಾನ್ ಧಿಯಾನ್ ಸತಿಕಾರ್ ಯೋಜನೆಯಡಿ ಸಾಮಾನ್ಯ ವರ್ಗದ ಮಹಿಳೆಯರಿಗೆ ಮಾಸಿಕ 1,000 ರೂ. ಮತ್ತು ಪರಿಶಿಷ್ಟ ಜಾತಿ (ಎಸ್ಸಿ) ಮಹಿಳೆಯರಿಗೆ 1,500 ರೂ.ಗಳ ಆರ್ಥಿಕ ಸಹಾಯ ನೀಡುವುದಾಗಿ ಪಂಜಾಬ್ ಸರ್ಕಾರ ಭಾನುವಾರ ಘೋಷಿಸಿದೆ. ಚುನಾವಣಾ ಪೂರ್ವದ ತನ್ನ ಪ್ರಮುಖ ಭರವಸೆಗಳಲ್ಲಿ ಒಂದಾಗಿದ್ದ ಈ ಯೋಜನೆಯನ್ನು ಈಡೇರಿಸಲು ಪ್ರಯತ್ನಿಸುತ್ತಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನದಂದು ರಾಜ್ಯ ವಿಧಾನಸಭೆಯಲ್ಲಿ 2026-27ರ ಪಂಜಾಬ್ ಬಜೆಟ್ ಅನ್ನು ಮಂಡಿಸಿದ ಹಣಕಾಸು ಸಚಿವ ಹರ್ಪಾಲ್ ಸಿಂಗ್ ಚೀಮಾ ಮುಖ್ಯಮಂತ್ರಿ ಮಾವಾನ್ ಧಿಯಾನ್ ಸತಿಕಾರ್ ಯೋಜನೆಯನ್ನು ಘೋಷಿಸಿದರು. ಈ ಯೋಜನೆಯು ಪ್ರಸ್ತುತ ಅರ್ಹತಾ ಮಾನದಂಡಗಳ ಅಡಿಯಲ್ಲಿ ಸುಮಾರು 97 ಪ್ರತಿಶತ ಮಹಿಳೆಯರನ್ನು ಒಳಗೊಳ್ಳುತ್ತದೆ ಎಂದು ಹೇಳಿದ್ದಾರೆ. ಸರ್ಕಾರವು ಈ ಕಾರ್ಯಕ್ರಮಕ್ಕಾಗಿ 9,300 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ಈ ಯೋಜನೆಯಡಿಯಲ್ಲಿ ಪಂಜಾಬ್ ಸರ್ಕಾರ ಈ ಆರ್ಥಿಕ ನೆರವನ್ನು ನೇರವಾಗಿ ಮಹಿಳೆಯರ ಬ್ಯಾಂಕ್ ಖಾತೆಗೆ ವರ್ಗಾಯಿಸಲಿದೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಭರ್ಜರಿ ಜಯ ಸಾಧಿಸಿದ ನಂತರ ಈ ಯೋಜನೆಯ ಜಾರಿ ಬಹುನಿರೀಕ್ಷಿತವಾಗಿತ್ತು.

ಪಂಜಾಬ್ ಸರ್ಕಾರ ಜಾರಿಗೆ ತಂದಿರುವ ಈ ಯೋಜನೆಯೂ ಭಾರತದಲ್ಲಷ್ಟೇ ಅಲ್ಲ, ಮಹಿಳೆಯರಿಗಾಗಿ ವಿಶ್ವದ ಮೊದಲ ಸಾರ್ವತ್ರಿಕ ನಗದು ವರ್ಗಾವಣೆ ಯೋಜನೆಯಾಗಿದೆ ಎಂದು ಚೀಮಾ ಹೇಳಿದ್ದಾರೆ.

''ಪಂಜಾಬ್‌ನಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಪ್ರತಿಯೊಬ್ಬ ಮಹಿಳೆಯೂ ಈ ಯೋಜನೆಯಡಿಯಲ್ಲಿ ದಾಖಲಾಗಲು ಅರ್ಹರಾಗಿರುತ್ತಾರೆ. ಕೆಲವರನ್ನು ಹೊರತುಪಡಿಸಿ ಅಂದರೆ, ಅಸ್ತಿತ್ವದಲ್ಲಿರುವ ಅಥವಾ ಹಿಂದಿನ ಖಾಯಂ ಸರ್ಕಾರಿ ನೌಕರರು, ಅಸ್ತಿತ್ವದಲ್ಲಿರುವ ಮತ್ತು ಹಿಂದಿನ ಸಂಸದರು/ಶಾಸಕರು ಮತ್ತು ಆದಾಯ ತೆರಿಗೆ ಪಾವತಿಸುವವರು, ಅಸ್ತಿತ್ವದಲ್ಲಿರುವ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಅಡಿಯಲ್ಲಿ ದಾಖಲಾಗಿರುವ ಮಹಿಳೆಯರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ. ವೃದ್ಧಾಪ್ಯ ಪಿಂಚಣಿ, ಅಥವಾ ವಿಧವೆ ಮಹಿಳಾ ಪಿಂಚಣಿ, ಅಂಗವೈಕಲ್ಯ ಪಿಂಚಣಿ ತೆಗೆದುಕೊಳ್ಳುವ ಮಹಿಳೆಯರು ಈ ಯೋಜನೆಯ ಲಾಭವನ್ನು ಪಡೆಯಲು ಅರ್ಹರಾಗಿರುತ್ತಾರೆ'' ಎಂದು ವಿವರಿಸಿದ್ದಾರೆ.

ಒಟ್ಟಾರೆಯಾಗಿ, ''ಪಂಜಾಬ್‌ನ ಎಲ್ಲ ವಯಸ್ಕ ಮಹಿಳೆಯರಲ್ಲಿ ಸುಮಾರು ಶೇ. 97ರಷ್ಟು ಜನರು ಈ ಯೋಜನೆಯಡಿ ಅರ್ಹರಾಗಿರುತ್ತಾರೆ. ಇದು ಭಾರತದ ಯಾವುದೇ ರಾಜ್ಯಕ್ಕೆ ಹೋಲಿಸಿದರೆ ಅತ್ಯಧಿಕವಾಗಿದೆ. ಈ ಉಪಕ್ರಮವು ಆರ್ಥಿಕ ಸ್ವಾತಂತ್ರ್ಯವನ್ನು ಉತ್ತೇಜಿಸಲು, ಮನೆಯ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಪಾತ್ರವನ್ನು ಬಲಪಡಿಸಲು, ಆರೋಗ್ಯ ಮತ್ತು ಪೌಷ್ಠಿಕಾಂಶದ ಫಲಿತಾಂಶಗಳನ್ನು ಸುಧಾರಿಸಲು ಮತ್ತು ಹುಡುಗಿಯರಲ್ಲಿ ನಿರಂತರ ಶಿಕ್ಷಣ ಮತ್ತು ಉನ್ನತ ಆಕಾಂಕ್ಷೆಗಳನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ'' ಎಂದು ತಿಳಿಸಿದ್ದಾರೆ.

ಮಹಿಳಾ ಸಬಲೀಕರಣ ಮತ್ತು ಸಮಾಜ ಕಲ್ಯಾಣ ಯೋಜನೆಗಳಿಗೆ ಪಂಜಾಬ್ ಸರ್ಕಾರವು ದಾಖಲೆಯ 18,304 ಕೋಟಿ ರೂಪಾಯಿಗಳ ಹಂಚಿಕೆಯನ್ನು ಪ್ರಸ್ತಾಪಿಸಿದೆ. ಇದು ಕಳೆದ ವರ್ಷಕ್ಕಿಂತ ಶೇ 96 ರಷ್ಟು ಹೆಚ್ಚಾಗಿದೆ. ಮಾಸಿಕ ಸಹಾಯ ಯೋಜನೆಯ ಜೊತೆಗೆ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕಾಗಿ 600 ಕೋಟಿ ರೂಪಾಯಿ, ಸಾಮಾಜಿಕ ಭದ್ರತಾ ಪಿಂಚಣಿಗಳಿಗೆ 6,150 ಕೋಟಿ ರೂಪಾಯಿ, ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳಿಗೆ (ಐಸಿಡಿಎಸ್) 932 ಕೋಟಿ ರೂಪಾಯಿ ಮತ್ತು ನವಿ ದಿಶಾ ಯೋಜನೆಯಡಿಯಲ್ಲಿ ಹದಿಹರೆಯದ ಬಾಲಕಿಯರಿಗೆ ಉಚಿತ ಸ್ಯಾನಿಟರಿ ಪ್ಯಾಡ್‌ಗಳಿಗೆ 65 ಕೋಟಿ ರೂ. ನೀಡಿದೆ.

ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಆಪ್ ಸರ್ಕಾರ ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳ ಬಳಿಕ ತನ್ನ ಚುನಾವಣಾ ಭರವಸೆಯೊಂದನ್ನು ಈಡೇರಿಸಲು ಮುಂದಾಗಿದೆ. ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಪ್ರತಿ ತಿಂಗಳು ಹಣ ವರ್ಗಾವಣೆ ಮಾಡುವ ಯೋಜನೆಯನ್ನು ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ಯೋಜನೆಯ ಮೂಲಕ ರಾಜ್ಯದ ಲಕ್ಷಾಂತರ ಮಹಿಳೆಯರಿಗೆ ಆರ್ಥಿಕ ನೆರವು ಒದಗಿಸುವ ಉದ್ದೇಶವಿದೆ.

ತೆಲಂಗಾಣ: ಹೆಣ್ಣುಮಕ್ಕಳಿಗೆ ಸ್ಕೂಟಿ

ತೆಲಂಗಾಣ ಸರ್ಕಾರವು ವಿದ್ಯಾರ್ಥಿನಿಯರ ಶಿಕ್ಷಣ ಮತ್ತು ಸ್ವಾವಲಂಬನೆಯನ್ನು ಉತ್ತೇಜಿಸಲು ಹೊಸ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯಡಿ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ಸ್ಕೂಟಿಗಳನ್ನು ನೀಡಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕಾಲೇಜುಗಳಿಗೆ ಪ್ರಯಾಣಿಸುವ ವಿದ್ಯಾರ್ಥಿನಿಯರಿಗೆ ಸುಲಭ ಸಂಚಾರ ವ್ಯವಸ್ಥೆ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಎಲೆಕ್ಟ್ರಿಕ್ ಸ್ಕೂಟರ್ ನೀಡುವ ಉದ್ದೇಶ ಮಹಿಳಾ ಸಬಲೀಕರಣ ಒಂದೇ ಅಲ್ಲ, ಪರಿಸರ ಮಾಲಿನ್ಯ ತಗ್ಗಿಸುವುದೂ ಆಗಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ತಿಳಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಉಚಿತ ಅಥವಾ ಸಹಾಯಧನದೊಂದಿಗೆ ಎಲೆಕ್ಟ್ರಿಕ್ ಸ್ಕೂಟಿಗಳನ್ನು ನೀಡುವ ಮೂಲಕ ಅವರ ಶಿಕ್ಷಣದ ನಿರಂತರತೆ ಹೆಚ್ಚಿಸಲು ಹಾಗೂ ಪರಿಸರ ಸ್ನೇಹಿ ಸಂಚಾರ ವ್ಯವಸ್ಥೆಯನ್ನು ಉತ್ತೇಜಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಜೊತೆಗೆ, ಈ ಯೋಜನೆ ಮೂಲಕ ಯುವತಿಯರಲ್ಲಿ ಸ್ವಾವಲಂಬನೆಯ ಭಾವನೆ ಬೆಳೆಸುವ ಉದ್ದೇಶವೂ ಇದೆ.

ಒಟ್ಟಿನಲ್ಲಿ, ಪಂಜಾಬ್ ಮತ್ತು ತೆಲಂಗಾಣ ಸರ್ಕಾರಗಳ ಈ ಘೋಷಣೆಗಳು ಮಹಿಳಾ ಕಲ್ಯಾಣ ಮತ್ತು ಶಿಕ್ಷಣಕ್ಕೆ ಉತ್ತೇಜನ ನೀಡುವತ್ತ ತೆಗೆದುಕೊಳ್ಳಲಾದ ಕ್ರಮಗಳಾಗಿವೆ. ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ವಿದ್ಯಾರ್ಥಿನಿಯರಿಗೆ ಸುಲಭ ಸಂಚಾರ ಸೌಲಭ್ಯ ಒದಗಿಸುವಂತಹ ಕ್ರಮಗಳ ಮೂಲಕ ಸರ್ಕಾರಗಳು ಮಹಿಳಾ ಸಬಲೀಕರಣದತ್ತ ಹೆಚ್ಚು ಗಮನ ಹರಿಸುತ್ತಿವೆ.

ಮಾಸ್ ಸಿನಿಮಾಗಳಲ್ಲಿ ನಂಜುಭರಿತ ಎಲಿಮೆಂಟ್ಸ್ ತುಂಬಿರುತ್ತವೆ; ಹೀರೋ ಪೂಜೆ ವಿರುದ್ಧ ಧ್ವನಿ ಎತ್ತಿದ ನಿತ್ಯಾ ಮೆನನ್!

ಮಾಸ್ ಸಿನಿಮಾ ಎಂದು ಕರೆಯಲ್ಪಡುವ ಕೆಲ ಚಿತ್ರಗಳು ಧನಾತ್ಮಕ ಬದಲಾವಣೆ ತರಬಹುದಾದ ಎಲ್ಲಾ ವಿಚಾರಗಳನ್ನು ತಳ್ಳಿಹಾಕುತ್ತವೆ. ಇವು ಒಬ್ಬ ವ್ಯಕ್ತಿಯ ವೈಭವೀಕರಣಕ್ಕಾಗಿ ಹುಟ್ಟಿಕೊಳ್ಳುತ್ತವೆ, ಪುರುಷವಾದಿ ಮನೋಭಾವದಿಂದ ಕೂಡಿರುವ, ಅತಿ ನಂಜುಭರಿತ ಎಲಿಮೆಂಟ್ಸ್ ಗಳನ್ನೇ ತುಂಬಿಕೊಂಡ ಇವು ಹಲವು ಆಯಾಮಗಳಲ್ಲಿ ಮನುಷ್ಯವಿರೋಧಿ ಚಿತ್ರಗಳೇ ಆಗಿರುತ್ತವೆ. ಈ ಕಹಿ ಸತ್ಯವನ್ನು ನಿಷ್ಠುರವಾಗಿ ಹೇಳಿದವರು ಬಹುಭಾಷಾ ನಟಿ ನಿತ್ಯಾ ಮೆನನ್.

ಭಾರತೀಯ ಸಿನೆಮಾ ಜಗತ್ತಿನಲ್ಲಿ ''ಮಾಸ್'' ಎಂಬ ಪದಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಜನಪ್ರಿಯ ಹೀರೋ, ಭರ್ಜರಿ ಫೈಟ್, ಭಾರೀ ಡೈಲಾಗ್, ಅಬ್ಬರದ ಹಿನ್ನೆಲೆ ಸಂಗೀತ, ಬಿಡುಗಡೆಗೂ ಮೊದಲು ಸಿಕ್ಕಾಪಟ್ಟೆ ಹೈಪ್, ಅಭಿಮಾನಿಗಳ ಕೂಗಾಟ.. ಇವೆಲ್ಲ ಸೇರಿ ನಿರ್ಮಾಣವಾಗುವ ಆ ಚಿತ್ರವನ್ನು ಸಿನಿಪ್ರಿಯರು ''ಮಾಸ್ ಎಂಟರ್ಟೈನ್ಮೆಂಟ್'' ಎಂಬ ಟ್ಯಾಗ್ ಅಂಟಿಸುತ್ತಾರೆ. ಆದರೆ ಇದೇ ಒಂದು ಮಾಸ್ ಸಿನೆಮಾದ ಒಳಹೊಕ್ಕು ನೋಡಿದರೆ, ಅದರೊಳಗೆ ಕಟ್ಟಿರುವ ಕೆಲ ಸಂಕುಚಿತ, ಸಂಪ್ರದಾಯವಾದಿ, ಗಂಡಾಳಿಕೆಯ ಗೂಡುಗಳು ಕಾಣಿಸುತ್ತವೆ.

ಸಿನಿಮಾ, ಸಾಮಾನ್ಯ ಮನುಷ್ಯನ ಜೀವನದ ಒಂದು ಭಾಗವಿದ್ದಂತೆ. ಸಿನಿಮಾ ಕನಸುಗಳನ್ನು ಬೆಳೆಸಬಲ್ಲದು, ಸಾಮಾಜಿಕ ಬದಲಾವಣೆಗಳನ್ನು ಉತ್ತೇಜಿಸಬಲ್ಲದು ಮತ್ತು ಕೆಲವೊಮ್ಮೆ ಸಮಾಜದ ಕತ್ತಲನ್ನೂ ತೊಳೆಯುವ ಶಕ್ತಿ ಅದಕ್ಕಿರುತ್ತದೆ. ಆದರೆ ಮಾಸ್ ಸಿನಿಮಾ ಎಂದು ಕರೆಯಲ್ಪಡುವ ಕೆಲ ಚಿತ್ರಗಳು ಧನಾತ್ಮಕ ಬದಲಾವಣೆ ತರಬಹುದಾದ ಎಲ್ಲಾ ವಿಚಾರಗಳನ್ನ ತಳ್ಳಿಹಾಕುತ್ತದೆ. ಇವು ಒಬ್ಬ ವ್ಯಕ್ತಿಯ ವೈಭವೀಕರಣಕ್ಕಾಗಿ ಹುಟ್ಟಿಕೊಳ್ಳುತ್ತವೆ, ಪುರುಷವಾದಿ ಮನೋಭಾವದಿಂದ ಕೂಡಿರುವ, ಅತಿ ನಂಜುಭರಿತ ಎಲಿಮೆಂಟ್ಸ್ ಗಳನ್ನೇ ತುಂಬಿಕೊಂಡ ಇವು ಹಲವು ಆಯಾಮಗಳಲ್ಲಿ ಮನುಷ್ಯವಿರೋಧಿ ಚಿತ್ರಗಳೇ ಆಗಿರುತ್ತವೆ. ಈ ಕಹಿ ಸತ್ಯವನ್ನು ನಿಷ್ಠುರವಾಗಿ ಹೇಳಿದವರು ಬಹುಭಾಷಾ ನಟಿ ನಿತ್ಯಾ ಮೆನನ್.

''ಮಾಸ್ ಸಿನಿಮಾ ಒಬ್ಬರಿಗಾಗಿ ಮಾತ್ರ ರಚಿಸಲ್ಪಡುತ್ತದೆ. ಅದು ಆ ವ್ಯಕ್ತಿಯನ್ನು ಹೀರೋ ಆಗಿ ಕಾಣಿಸುವುದಕ್ಕಾಗಿ ಮಾತ್ರ. ಎಲ್ಲವೂ ಅವರ ಸುತ್ತ ತಿರುಗುತ್ತದೆ. ಅದು ಅತ್ಯಂತ ವಿಷಕಾರಿ. ಪುರುಷವಾದಿ ಎನ್ನುವುದರಲ್ಲಿ ಹಲವು ತಪ್ಪುಗಳಿರುತ್ತೆ'' ಎಂದು ಅವರು ಹೇಳಿದ್ದಾರೆ. ಈ ಧ್ವನಿ ಆಕೆಯ ಅಭಿಪ್ರಾಯ ಮಾತ್ರವಲ್ಲದೆ ಸಮಕಾಲೀನ ಸಿನಿಮಾ ಇಂಡಸ್ಟ್ರಿಯ ದೊಡ್ಡದೊಂದು ಸಮಸ್ಯೆಯನ್ನು ಎತ್ತಿ ತೋರುತ್ತದೆ.

ಈಗಾಗಲೇ ಜನಜನಿತನಾಗಿರುವ ಹೀರೋನನ್ನು ದೇವರಂತೆ ಚಿತ್ರಿಸುವುದೇ ಈ ಮಾಸ್ ಸಿನಿಮಾಗಳ ಮೂಲ ಲಕ್ಷಣ. ರಜನೀಕಾಂತ್, ವಿಜಯ್, ಪ್ರಭಾಸ್, ಅಜಿತ್ ಅಥವಾ ಮೈಕಲ್ ಜಾಕ್ಸನ್‌ರಂತೆಯೇ, ಈ ಹೀರೋಗಳು ಚಿತ್ರದ ಕೇಂದ್ರಬಿಂದು. ಇತರ ಪಾತ್ರಗಳು, ವಿಶೇಷವಾಗಿ ಮಹಿಳಾ ಪಾತ್ರಗಳು, ಕೇವಲ ಚಿತ್ರಕ್ಕೆ ಅಲಂಕಾರಿಕ ಅಥವಾ ಹೀರೋನನ್ನ ಉನ್ನತೀಕರಿಸುವ ಸಾಧನಗಳಾಗಿರುತ್ತವೆ. ಎಲ್ಲವೂ ಹೀರೋ ಸುತ್ತ ತಿರುಗುವುದರಿಂದ ಚಿತ್ರದ ಕಥೆಯನ್ನು, ಸಂಭಾಷಣೆಗಳನ್ನು, ಹಾಡುಗಳನ್ನು, ಫೈಟ್ ಸೀನ್ಗಳನ್ನು ಸಹ ಹೀರೋ ಸೇವೆಗೆ ಸಮರ್ಪಿಸಲಾಗುತ್ತದೆ.

ಉದಾಹರಣೆಗೆ, ಬಾಹುಬಲಿ ಸರಣಿಯನ್ನು ತೆಗೆದುಕೊಳ್ಳಿ. ಬಾಹುಬಲಿಯಾಗಿ ಪ್ರಭಾಸ್, ಒಬ್ಬ ಮಹಾನ್ ಯೋಧನಾಗಿ, ರಾಜನಾಗಿ, ಪ್ರೇಮಿಯಾಗಿ ಎಲ್ಲ ಪಾತ್ರಗಳಲ್ಲೂ ಅಚ್ಚುಕಟ್ಟಾಗಿ ಚಿತ್ರಿಸಲ್ಪಟ್ಟಿದ್ದಾರೆ. ಆದರೆ ಅವರ ಸುತ್ತಲಿನ ಮಹಿಳಾ ಪಾತ್ರಗಳು? ಅನುಷ್ಕಾ ಅಭಿನಯಿಸಿದ ದೇವಸೇನಾ ಕೇವಲ ಬಾಹುಬಲಿಯ ಪ್ರೇಮಿಯಾಗಿ, ರಾಜನ ಗುಂಪಿನಲ್ಲಿ ಬಂಧಿಯಾಗಿ ಕಾಣಿಸುತ್ತಾಳೆ. ಇಲ್ಲಿ ಕಥೆ ಬಾಹುಬಲಿಯ ವೀರತ್ವದ ಮೇಲೆ ಕೇಂದ್ರೀಕರಿಸಿದೆಯೇ ಹೊರತು, ಸಾಮಾಜಿಕ ಸಂದರ್ಭಗಳು ಅಥವಾ ಮಹಿಳಾ ಸ್ವಾತಂತ್ರ್ಯದಂತಹ ವಿಷಯಗಳಲ್ಲಿ ಹಿಂದೆ ಬಿದ್ದಿದೆ.

ಈ ರೀತಿಯ ಸಿನೆಮಾಗಳು ಸಮಾಜದಲ್ಲಿ ಸೂಪರ್‌ಮ್ಯಾನ್ ಕಲ್ಪನೆಯನ್ನು ಬೆಳೆಸುತ್ತವೆ. ಹೀರೋ ಎಲ್ಲವನ್ನೂ ಉಳಿಸುತ್ತಾನೆ, ಏನು ಬೇಕಾದರೂ ಮಾಡುತ್ತಾನೆ ಎಂಬ ಭ್ರಮೆ ಸೃಷ್ಟಿಸುತ್ತವೆ. ಅದೇ ಭ್ರಮೆಯಲ್ಲಿ ನಾವು ಸಾಮಾಜಿಕ ಸಮಸ್ಯೆಗಳನ್ನು ಒಪ್ಪಿಕೊಳ್ಳುತ್ತೇವೆ. ಹೀರೋಗಳು ತಮ್ಮ ಚಿತ್ರಗಳಲ್ಲಿ ದೇವರು, ರಾಜ, ಯೋಧ ಎಲ್ಲರೂ ಆಗಬಹುದು. ಇದರಿಂದ ಇತರ ಸಣ್ಣ ಪುಟ್ಟ ಕಲಾವಿದರಿಗೆ ಅವಕಾಶ ಕಡಿಮೆಯಾಗುತ್ತದೆ. ತಮ್ಮ ಪ್ರತಿಭೆ ಮೂಲಕ ಹೀರೋಯಿಸಂ ಬೇಸ್ಡ್ ಸಿನೆಮಾಗಳನ್ನು ಬೆಂಬಲಿಸುವುದಕ್ಕಿಂತಲೂ ಹೆಚ್ಚು ಸ್ವತಂತ್ರ ಪಾತ್ರಗಳನ್ನು ಕೆಲ ನಟಿಯರು ಹುಡುಕುತ್ತಾರೆ. ಅವರಲ್ಲಿ ನಿತ್ಯಾ ಕೂಡ ಒಬ್ಬರು.

ನಿತ್ಯಾ ಈ ಪ್ರವೃತ್ತಿಯನ್ನು ಸೆಕ್ಸಿಸ್ಟ್ ಎಂದು ಕರೆದಿದ್ದಾರೆ. ಅಂದರೆ ಪುರುಷವಾದಿ. ಮಾಸ್ ಸಿನಿಮಾಗಳು ಮಹಿಳಾ ಪಾತ್ರಗಳನ್ನು ಯಾವಾಗಲೂ ಒಂದೇ ರೀತಿಯಲ್ಲಿ ಚಿತ್ರಿಸುತ್ತವೆ. ಸೌಂದರ್ಯದ ಸಂಕೇತ, ಹೀರೋನನ್ನು ಪ್ರಶಂಸಿಸುವವಳು ಹೀಗೆ ಇಲ್ಲೂ ಕೂಡ ಹೀರೋನ ಸುತ್ತಲೇ ಇರಬೇಕಾಗುತ್ತದೆ. ಇದು ಸಮಾಜದಲ್ಲಿನ ಪುರುಷಾಧಿಪತ್ಯವನ್ನು ಮತ್ತಷ್ಟು ಬಲಪಡಿಸುತ್ತದೆ. ಇನ್ನು ಕೆಲ ಸಿನಿಮಾಗಳು ಮಹಿಳಾ ಸ್ವಾತಂತ್ರ್ಯವನ್ನು ಬದಿಗೆ ಸರಿಸಿ ಮಹಿಳೆಯರನ್ನ ಕೆಲ ವಸ್ತುಗಳಂತೆ ಚಿತ್ರಿಸಿಬಿಡುತ್ತವೆ. ಇಲ್ಲಿ ಮಹಿಳೆಯರ ಆಯ್ಕೆಗಳು, ಆಕಾಂಕ್ಷೆಗಳು ಮುಖ್ಯವಾಗಲ್ಲ, ಅವುಗಳು ಹೀರೋಗೆ ಹೀರೋಯಿಸಂ ತೋರಿಸುವ ಸಾಧನಗಳಾಗುತ್ತವೆ. ಇದರಿಂದ ಪುರುಷ ಯುವ ಜನತೆ ನಾವು ಮಹಿಳೆಯರನ್ನು ನಿಯಂತ್ರಿಸಬೇಕಾದವರು ಅನ್ನೋದನ್ನೇ ಕಲಿಯುತ್ತದೆ.

ಮಾಸ್ ಸಿನಿಮಾದ ಮತ್ತೊಂದು ದೊಡ್ಡ ಸಮಸ್ಯೆ ಅದರ ನಂಜು. ಒಬ್ಬ ಹೀರೋ ಹತ್ತಿಪ್ಪತ್ತು ಶತ್ರುಗಳನ್ನು ಕೊಂದುಹಾಕುತ್ತಾನೆ. ಇದನ್ನು ನೋಡುವ ಜನ ಹುಚ್ಚೆದ್ದು ಕುಣಿಯುತ್ತಾರೆ. ನಂಜನ್ನೂ ಗ್ಲಾಮರಸ್ ಆಗಿ ತೋರಿಸುವ ಈ ಕೆಟ್ಟ ಚಾಳಿ ನಿಜಜೀವನದಲ್ಲಿ ಹಿಂಸೆಯ ಸಂಸ್ಕೃತಿಯನ್ನು ಪೋಷಿಸುತ್ತದೆ. ಅದರಿಂದ ಪ್ರಭಾವಿತರಾದವರು ನನ್ನ ಹಕ್ಕುಗಳಿಗಾಗಿ ಹಿಂಸೆ ಮಾಡಬೇಕು ಅಥವಾ ಹಿಂಸೆ ಕೊಡಬೇಕು ಎಂದು ಕಲಿಯುತ್ತಾರೆ. ಸಂಶೋಧನೆಗಳ ಪ್ರಕಾರ, ಇಂತಹ ಚಿತ್ರಗಳನ್ನು ನೋಡುವ ಯುವಕರು ಹಿಂಸಾತ್ಮಕ ವರ್ತನೆಯನ್ನು ಸ್ವೀಕಾರಾರ್ಹವೆಂದು ಭಾವಿಸುತ್ತಾರೆ. ಇದು ಮಹಿಳಾ ಹಿಂಸೆಯನ್ನು ಸಹ ಉತ್ತೇಜಿಸುತ್ತದೆ. ಏಕೆಂದರೆ ಹೀರೋ ತನ್ನ ಪ್ರೇಮಿಯನ್ನು ರಕ್ಷಿಸಲು ಹಿಂಸೆ ಮಾಡುತ್ತಾನೆ ಎಂಬ ಭ್ರಮೆ!

ಹಲವು ಸಿನಿಮಾಗಳು ಹಲವು ರೀತಿಯಲ್ಲಿ ಮನುಷ್ಯವಿರೋಧಿ ಅನ್ನೋದು ನಿತ್ಯಾ ಮೆನನ್ ಮಾತಿನ ಭಾವ. ಮಾಸ್ ಸಿನಿಮಾ ಮಾನವೀಯ ಮೌಲ್ಯಗಳನ್ನು ನಿರಾಕರಿಸುತ್ತದೆ. ಸಹಾನುಭೂತಿ, ಸಂವಾದ, ಸಾಮೂಹಿಕತೆ ಇವುಗಳಿಲ್ಲದೆ, ಕೇವಲ ವೈಯಕ್ತಿಕ ವೀರತ್ವ ಮಾತ್ರ ಮಾಸ್ ಸಿನಿಮಾಗಳಲ್ಲಿ ಕಾಣಿಸುತ್ತದೆ. ನಿತ್ಯಾ ಟೀಕೆ ಮಾತ್ರ ಮಾಡಿಲ್ಲ; ಬದಲಾವಣೆಗಾಗಿ ಕೆಲಸ ಮಾಡಬೇಕು ಅಂತಲೂ ಆಶಿಸುತ್ತಿದ್ದಾರೆ.

ಮಲಯಾಳಂ ಸಿನಿಮಾದಲ್ಲಿ ದೃಶ್ಯಂ ಅಥವಾ ಮಂಜಮೇಲ್ ಬಾಯ್ಸ್‌ರಂತಹ ಚಿತ್ರಗಳು ಇದಕ್ಕೆ ಉದಾಹರಣೆ. ಇಲ್ಲಿಗೆ ಹೀರೋ ಪ್ರಧಾನತೆ ಇಲ್ಲ, ಮಾನವೀಯ ಕಥೆಗಳು ಇವೆ. ಇಂತಹ ಚಿತ್ರಗಳು ಸಮಾಜವನ್ನು ಪ್ರಶ್ನಿಸುತ್ತವೆ, ಬದಲಾಯಿಸುತ್ತವೆ. ಸಿನಿಮಾ ಇಂಡಸ್ಟ್ರಿ, ನಿರ್ಮಾಪಕರು, ನಿರ್ದೇಶಕರು ಈ ಕಟು ಸತ್ಯವನ್ನು ಅಂಗೀಕರಿಸಬೇಕು. ಪ್ಲಾಟ್‌ಫಾರಂಗಳು ಈ ಬದಲಾವಣೆಗೆ ಅವಕಾಶ ನೀಡುತ್ತಿವೆ. ನಿತ್ಯಾ ಮೆನನ್ ಅವರಂತಹ ನಟಿಯರು ಪ್ರೊಡ್ಯೂಸರ್ ಆಗಿ ಮುಂದುವರಿದರೆ, ಹೆಚ್ಚಿನ ವೈವಿಧ್ಯಮಯ ಚಿತ್ರಗಳು ಬರುತ್ತವೆ.

ನಿತ್ಯಾ ಮೆನನ್ ಬಗ್ಗೆ ಹೇಳಲೇಬೇಕು, ಆಕೆ ಅಪ್ಪಟ ಕನ್ನಡತಿ. ಕೇರಳ ಮೂಲದ ನಿತ್ಯಾ ಪೋಷಕರು ದಶಕಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ನಿತ್ಯಾ ಹುಟ್ಟಿ ಬೆಳೆದಿದ್ದು, ಶಿಕ್ಷಣ ಪೂರೈಸಿದ್ದು ಎಲ್ಲವೂ ಕನ್ನಡದ ನೆಲದಲ್ಲಿ. ಬೆಂಗಳೂರಿನಲ್ಲಿ ಆಡಿ ಬೆಳೆದ ಈ ಬೆಡಗಿಗೆ ಕನ್ನಡ ಓದಲು, ಬರೆಯಲು ಸುಲಲಿತ. ಹಲವು ಸಂದರ್ಶನಗಳಲ್ಲಿ ಆಕೆ ಹೆಮ್ಮೆಯಿಂದ ನಾನು ಕನ್ನಡದ ಹುಡುಗಿ ಎಂದು ಹೇಳಿಕೊಂಡಿದ್ದಾರೆ.

ಸಿನೆಮಾ ಅಂದರೆ ಒಬ್ಬ ವ್ಯಕ್ತಿಯನ್ನ ವೈಭವೀಕರಿಸುವ ವೇದಿಕೆಯಾಗಿರಬೇಕೇ? ಅಥವಾ ಮನುಷ್ಯರ ವೈವಿಧ್ಯಮಯ ಕಥೆಗಳನ್ನು ಹೇಳುವ ಕಲಾಮಾಧ್ಯಮವಾಗಿರಬೇಕೇ? ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯಾಣವೇ, ಬಹುಶಃ ಭಾರತೀಯ ಸಿನೆಮಾದ ಮುಂದಿನ ಅಧ್ಯಾಯವನ್ನು ನಿರ್ಧರಿಸಬಹುದು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR